3

# ಪಿತೃಗಳ ಕಾಲಾವದಿ

## ಅಬ್ರಹಾಮನ ಕರೆಯುವಿಕೆಯಿಂದ ಐಗುಪ್ತಕ್ಕೆ ವಲಸೆ ಹೋಗುವವರೆಗೆ

## ಕ್ರಿ.ಪೂ. 1921-1706 (ಆದಿಕಾಂಡ 11:27-50:26)

**ಪೀಠಿಕೆ – ಇಬ್ರಿಯರ ನಿಯೋಗ.**-ಒಬ್ಬ ವಿಮೋಚಕನ ಮೊಬ್ಬಾದ ಮೊದಲನೆಯ ವಾಗ್ದಾನವನ್ನು (ಆದಿಕಾಂಡ 3:15) ಜನಂಗಕ್ಕಾಗಿ ನಿರೀಕ್ಷೆಯ ಒಂದು ಕಿರಣವನ್ನು ನಾವು ನೋಡಿದ್ದೇವೆ. ಜಲಪ್ರಳಯಕ್ಕಿಂತ ಮೊದಲಿದ್ದ ದೃಷ್ಯಕೃತ್ಯಗಳ ಮಧ್ಯದಲ್ಲಿ ಹೆಚ್ಚಾದ ನಿರೀಕ್ಷೆಯು ಸತ್ತು ಹೋಯಿತು ಮತ್ತು ಜಲಪ್ರಳಯಕ್ಕೆ ಕಾರಣವಾಯಿತು. ಜಲಪ್ರಳಯದ ನಂತರವೂ ಆಕಾಶವು ಬೇಗನೇ ಮೋಡಮುಸುಕಿದ್ದಾಯಿತು. ನಾಗರಿಕತೆಯ ಪುರಾತನ ಸ್ಥಳಗಳು ಮತ್ತು ನೈಲ ಹಾಗೂ ಯೂಫ್ರೇಟೀಸ್‌ದ ಮೇಲಿನ ಸಾಮ್ರಾಜ್ಯವು ಅಸಹ್ಯಕರವಾದ ವಿಗ್ರಹಾರಾಧನೆಗಳ ಕೇಂದ್ರಗಳಾದವು. ಯಾವುದೋ ಕಡೆಯಲ್ಲಿ, ಯಾರೋ ಒಬ್ಬನಿಂದ, ಒಬ್ಬನೇ ನಿಜವಾದ ದೇವರಿಗಾಗಿ ಒಂದು ನಿಲುವು ತೆಗೆದು ಕೊಳ್ಳಲ್ಪಡಬೇಕು. ಇಲ್ಲದಿದ್ದರೆ ಕುಲವು *ನಿರೀಕ್ಷೆಯಿಲ್ಲದೆ ತಪ್ಪಿಹೋಗುವುದು,* ಇದು ಇಬ್ರಿಯರ ಗಂಭೀರವಾದ ನಿಯೋಗವಾಗಿತ್ತು. ಸ್ವಲ್ಪ ಸಮಯಕ್ಕೆ ದೇವರು ಹಾಮ ಮತ್ತು ಯಾಫೆತನ ಕುಲಗಳನ್ನು ದಾಟಿ ಹೋಗುತ್ತಾನೆ. ದೊಡ್ಡ ಸೆಮಿಟಿಕ್ ಕುಲವನ್ನು ದಾಟಿಹೋಗಿ ಆತನು ಆ ಕುಲದ ಕಲ್ದೀಯ ಶಾಖೆಯ ಒಂದು ಕುಟುಂಬವನ್ನು ರಕ್ಷಿಸುತ್ತಾನೆ. ದೇವರ ಜ್ಞಾನವನ್ನು ಸಜೀವವಾಗಿ ಇಡಲು ಮತ್ತು ಅಂತಿಮವಾಗಿ, ವಾಗ್ದತ್ತ "ಸಂತತಿಯ," ಮುಖಾಂತರ ಎಲ್ಲಾ ಕುಲಗಳನ್ನು ದೇವರ ಅನ್ಯೋನ್ಯತೆಗೆ ತರುವುದು - ಇಂಥದ್ದು ದೈವಿಕ ಉದ್ದೇಶವಾಗಿರುವುದು. ಹಾಗಿದ್ದರೂ ಆಸಕ್ತಿಯು ಘಟನೆಗಳ ಮೇಲೆ ಕೇಂದ್ರೀಕರಿಸಿತು ಆದರೆ ಮನುಷ್ಯರ ಮೇಲೆ ಅಲ್ಲ, ಸೃಷ್ಠಿಸಲ್ಪಟ್ಟವರಲ್ಲಿ ಕೆಲವರು ಮಾತ್ರವೇ ಇದ್ದರು. ಪರಿಶುದ್ಧ ಚರಿತ್ರೆಕಾರನು ಶತಮಾನಗಳನ್ನೊಳಗೊಂಡಿರುವ, ಆಶ್ಚರ್ಯಕರವಾದ ಘಟನೆಗಳ ಶಿಖರದಿಂದ ಶಿಖರಕ್ಕೆ ಅತೀ ದೊಡ್ಡ ದಿಪುಗಾಲುಗಳ ಹೆಜ್ಜೆಯಿಡುತ್ತ ಮುಂದುವರಿದಿದ್ದಾನೆ. ಈ ಅಂಶದಿಂದ, ಆಸಕ್ತಿಯು ಮಾನವರಲ್ಲಿ ಕೇಂದ್ರೀಕರಿಸುತ್ತದೆ; ಚರಿತ್ರೆಯ ಪ್ರಮುಖ ಪ್ರವಾಹವು ಒಂದು ಕುಲಕ್ಕೆ ಇಬ್ರಿಯರ ಕಡೆಗೆ ಸಂಕುಚಿತವಾಗುತ್ತ ಬರುತ್ತದೆ, ಮತ್ತು ಸತತವಾಗಿ ಪೂರ್ಣವಾಗಿ ಬೆಳೆಯುತ್ತದೆ. ಈ ಅವಧಿಯ ಕಥೆಯು ಇಬ್ರಿಯರ ಯಾತ್ರಿ ಪಿತೃಗಳಾದ ಅಬ್ರಹಾಮ, ಇಸಾಕ, ಯಾಕೋಬ ಮತ್ತು ಯೋಸೇಫರ, ನಾಲ್ಕು ಜನ ಮಹಾಪಿತೃಗಳ ಜೀವಿತಗಳನ್ನು ಅನುಸರಿಸುತ್ತದೆ.

### I. ಅಬ್ರಹಾಮನ ಜೀವನ.

### (ಆದಿಕಾಂಡ 11:27-25:10.)

ಅಬ್ರಹಾಮನು "ನಂಬಿಗಸ್ತ ತಂದೆಯಂತೆ," ಮತ್ತು ಇಬ್ರಿಯ ಜನಾಂಗದ ಸ್ಥಾಪಕನಂತೆ ಎಲ್ಲಾ ಸಮಯಗಳಲ್ಲಿ ದೊಡ್ಡ ವ್ಯಕ್ತಿಗಳಲ್ಲಿ ಒಬ್ಬನಾಗಿದ್ದಾನೆ. ಅವನ ಜೀವಿತವು ಸ್ವಾಭಾವಿಕವಾಗಿ ಎರಡು ಮುಖ್ಯವಿಭಾಗಗಳಲ್ಲಿರುತ್ತದೆ, ಅಂದರೆ.:

(1) ಸಂಚಾರಗಳು, ಮತ್ತು (2) ಹೆಬ್ರೊನಿನಲ್ಲಿ ನೆಲೆಸಿದ ಜೀವನ.

**1. ಸಂಚಾರಗಳು.**-*a. ಮೊದಲಿನ ಮನೆ.*-ಅಬ್ರಹಾಮನು ಊರ್‌ದ ನಿವಾಸಿಯಾಗಿದ್ದನು, ಇದು ಯೂಫ್ರೇಟೀಸ್‌ನ ಕೆಲಭಾಗದಲ್ಲಿತ್ತು, ಪುರಾತನ ಏಸಿಯಾಟಿಕ್ ಸಂಸ್ಕೃತಿಯ ಕೇಂದ್ರವಾಗಿತ್ತು. ಮೊದಲು ಹಾಮಿಟಿಕ್ ಇಲ್ಲವೇ ಟುರಾನಿಯನ್ ಆಗಿದ್ದು, ಅದು ಗೆಲ್ಲುವಿಕೆಯಿಂದ ಸೆಮಿಟಿಕ್ ಆಯಿತು. ಅದು ಸ್ಪಷ್ಟವಾಗಿ ವಿಗ್ರಹಾರಾಧಕನಾಗಿತ್ತು (ಹೋಲಿಸು ಆದಿಕಾಂಡ 11:31; ಯೆಹೋಶುವ 24:2).

*b. ಕರೆಯುವಿಕೆ ಮತ್ತು ಒಡಂಬಡಿಕೆ* (ಆದಿಕಾಂಡ 12:1-3).-ಇಲ್ಲಿ ಅವನು ಮನೆಯನ್ನು, ಬಂಧುಗಳನ್ನು, ಸ್ವದೇಶವನ್ನು ಬಿಟ್ಟುಹೋಗುವುದಕ್ಕೆ ಮತ್ತು ಇನ್ನು ತಿಳಿಸಲ್ಪಡುವ ದೇಶವನ್ನು ಹುಡುಕುವುದಕ್ಕೆ ಕರೆಯಲ್ಪಟ್ಟನು. ಧಾರ್ಮಿಕವಾಗಿ, ಈ ಕರೆಯು ಮತ್ತು ಅದರ ಪರಿಣಾಮವು ಪತನದ ನಂತರ ಅತೀ ಮಹತ್ವದ ಘಟನೆಯಾಗಿತ್ತು. ದೇವರು ಇದರೊಂದಿಗೆ ತನ್ನ ಒಡಂಬಡಿಕೆಯನ್ನು ಕೂಡಿಸಿದನು. ಅದು ನಾಲ್ಕು ವಾಗ್ದಾನಗಳನ್ನು ಒಳಗೊಂಡಿತ್ತು: (1) ಒಂದು ದೊಡ್ಡ ಜನಾಂಗ: ಹಿಬ್ರು ಇಲ್ಲವೇ ಯೆಹೂದಿ ಜನಾಂಗದಲ್ಲಿ ನೆರವೇರಿತು. (2) ಒಂದು ದೊಡ್ಡ ಹೆಸರು. ನಿಮ್ರೋದರು ಮತ್ತು ಫರೋಹರು ಮತ್ತು ಕೈಸರರು, ಅವರು ಜೀವಿಸಿದ್ದಾಗ ಜಗತ್ತಿನ ಅಳತೆಯಲ್ಲಿ ದೊಡ್ಡ ಸ್ಥಾನವನ್ನು ತುಂಬಿಕೊಂಡಿದ್ದರು, ಆದರೆ ಅವರಲ್ಲಿ ಒಬ್ಬನಾದರೂ ಚರಿತ್ರೆಯಲ್ಲಿ ಅಷ್ಟು ವಿಶಾಲವಾದ ಗುರುತನ್ನು ಬಿಟ್ಟು ಹೋಗಲಿಲ್ಲ, ಇಲ್ಲವೇ ಜನಾಂಗದ ಮೇಲೆ ತನ್ನನ್ನಾಗಲೀ ಇಲ್ಲವೇ ತನ್ನ ವಿಚಾರಗಳನ್ನಾಗಲೀ ಪ್ರಭಾವಿತಕೊಳಿಸಲಿಲ್ಲ. ಮೂರು ಮಹಾ ಧರ್ಮಗಳು ಅಬ್ರಹಾಮನ ಕಡೆಗೆ ನಂಬಿಗಸ್ತ ತಂದೆಯಂತೆ ಹಿಂದಿರುಗಿ ನೋಡುತ್ತವೆ: ಯೆಹೂದಿ, ಕ್ರೈಸ್ತ ಮತ್ತು ಮೊಹ್ಮದಾನ. (3) ಒಂದು ದೇಶ; ಇಬ್ರೀಯರಿಂದ ಕಾನಾನು ವಶಪಡಿಸಿಕೊಳ್ಳಲ್ಪಟ್ಟಾಗ ಇದು ನೆರವೇರಿತು. (4) ಎಲ್ಲಾ ಜನಾಂಗಗಳಿಗೆ ಒಂದು ಆಶೀರ್ವಾದ; ಎರಡು ಸಾವಿರ ವರ್ಷಗಳ ನಂತರ ಕ್ರಿಸ್ತನಲ್ಲಿ ಮತ್ತು ಸುವಾ ರ್ತೆಯ ವಿಶ್ವವ್ಯಾಪಿ ಘೋಷಣೆಯಲ್ಲಿ ನೆರವೇರಿತು. ಸತತವಾಗಿ ವಿಶಾಲವಾಗುತ್ತಿರುವ ವೃತ್ತಗಳಲ್ಲಿ, ಅದು ಇನ್ನೂ ನೆರವೇರುವ ಪ್ರಗತಿಯಲ್ಲಿದೆ.

*c. ವಲಸೆ ಹೋದದ್ದು.*-ಪ್ರತಿಯೊಂದು ಪ್ರತ್ಯೇಕವಾದ ಜನಾಂಗಿಕ ಜೀವಿತವು ವಲಸೆ ಹೋಗುವುದರಲ್ಲಿ ಬೇರೂರಿರುತ್ತದೆ; ಆದರೆ ಕೆಲವು ವಲಸೆ ಹೋಗುವಿಕೆಗಳು ಬಹಳ ಪ್ರತ್ಯೇಕವಾಗಿ ಧಾರ್ಮಿಕವಾದವುಗಳಾಗಿರುತ್ತವೆ ಇಲ್ಲವೇ ಇಬ್ರಿಯರಂತೆ ಸ್ಪಷ್ಟವಾದ ಐತಿಹಾಸಿಕ ಬೆಳಕಿನಲ್ಲಿ ನೆಲೆಗೊಂಡಿರುತ್ತವೆ. ಎಪ್ಪತ್ತೈದನೆಯ ವಯಸ್ಸಿನಲ್ಲಿ, ಬಂಧುಗಳೊಂದಿಗೂ ಸ್ವದೇಶದೊಂದಿಗೂ ಬಂಧನಗಳನ್ನು ಕಡಿದುಕೊಂಡು, ಅವನು ಎಲ್ಲಿಗೆ ಹೋಗುವವನೋ ಎಂಬುದನ್ನು ಅರಿಯದೇ ವೀರ ವಿಶ್ವಾಸಕ್ಕೆ ಕರೆಯಲ್ಪಟ್ಟನು. "ನಂಬಿಕೆಯಿಂದ ಅವನು ವಿಧೇಯನಾದನು, ಮತ್ತು ಅವನು ಎಲ್ಲಿಗೆ ಹೋಗುವುದೆಂದು ತಿಳಿಯದೇ ಹೊರಟನು" (ಇಬ್ರಿಯ 11:8). *ಅಂಥ* ಮನುಷ್ಯನು ಸದಾ ಉಳಿಯುವಂತ ಜನಾಂಗವನ್ನು ಸ್ಥಾಪಿಸಲು ಮತ್ತು ಘನವಾದ ಸತ್ಯಕ್ಕಾಗಿ - ದೇವರ ಐಕ್ಯತೆ - ಎಡೆ ಮಾಡಿಕೊಡಲು ಯೋಗ್ಯನಾಗಿದ್ದನು.

ತನ್ನ ತಂದೆ ತೆರಹನೊಂದಿಗೆ, ತನ್ನ ನಾಥ ಸೋದರಳಿಯ ಲೋಟನೊಂದಿಗೆ, ಹಾಗೂ ತನ್ನ ಹೆಂಡತಿ ಸಾರಳೊಂದಿಗೆ, ಅವನು ಯೂಫ್ರೇಟೀಸಿನ ಮೇಲಿನಿಂದ ಹಾರಾನಿಗೆ ಬಂದನು. ಅಲ್ಲಿ ತೆರಹನು ಮರಣಹೊಂದಿದನು, ಮತ್ತು ಅಬ್ರಹಾಮನು, ದೈವಿಕ ಕರೆಗೆ ಇನ್ನೂ ವಿಧೇಯನಾಗಿ ಯೂಫ್ರೇಟೀಸ ಪ್ರದೇಶದಿಂದ ಕಾನಾನ ದೇಶಕ್ಕೆ ಹೊರಟನು. ಈಗ ಅವನು ಅಪರಿಚಿತ ದೇಶದಲ್ಲಿ ಮತ್ತು ಪರದೇಶಸ್ಥ ಜನಾಂಗದವರ ಮಧ್ಯದಲ್ಲಿದ್ದಾನೆ. ಶೆಕೆಮ್‌ನಲ್ಲಿ ದೇವರು ಅವನಿಗೆ ಕಾಣಿಸಿಕೊಂಡು ಒಡಂಬಡಿಕೆಯನ್ನು

ನವೀಕರಿಸುತ್ತಾನೆ: "ನಾನು ಈ ದೇಶವನ್ನು ನಿನ್ನ ಸಂತಾನಕ್ಕೆ ಕೊಡುವೆನು"[1] ಆದುದರಿಂದ ಇದು ದೇಶವಾಗಿದೆ. ವಲಸೆ ಹೋದದ್ದು ಸಾಧಿಸಲ್ಪಟ್ಟಿತು.

ಕೆಲವು ವರ್ಷಗಳವರೆಗೆ ಅಬ್ರಹಾಮನು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಅಲೆದಾಡಿದನು. ಅವನು (1) ಬೇತೇಲ್, (2) ದಕ್ಷಿಣ, (3) ಐಗುಪ್ತ, (4) ದಕ್ಷಿಣ, (5) ಬೇತೇಲ್‌ಗಳಲ್ಲಿ ಸಂಚರಿಸಿದನು. ಇಲ್ಲಿ ಲೋಟ ಮತ್ತು ಅಬ್ರಹಾಮ ಬೇರೆಯಾದರು; ಲೋಟನು ಯೊರ್ದನ್ ಕಣಿವೆಯಲ್ಲಿ ಸೊದೋಮಿನ ಕಡೆಗೆ ಹೊರಟನು. ಮತ್ತು ಸೊದೋಮಿನಲ್ಲಿ ನೆಲೆಸಿದನು. (6) ಅಬ್ರಹಾಮನು ದಕ್ಷಿಣದಲ್ಲಿ ಹೆಬ್ರೋನಿಗೆ ಹೋದನು. ಇದು ಹೆಚ್ಚಾಗಿ ನೆಲಗೊಂಡ ಜೀವನದ ಕೇಂದ್ರವಾಯಿತು. ಆದರೆ ಕೊನೆಯವರೆಗೆ ಅವನು ಡೇರೆಗಳಲ್ಲಿ ವಾಸಮಾಡಿದನು. ಎಲ್ಲಾ ಕಡೆಗಳಲ್ಲಿ ಅವನು ತನ್ನ ಯಜ್ಞವೇದಿಯನ್ನು ಕಟ್ಟಿದನು. ಡೇರೆ ಮತ್ತು ಯಜ್ಞವೇದಿ ಅವನ ಕಾನಾನ್ ಜೀವನದ ಮುಖ್ಯ ಲಕ್ಷಣವಾಗಿದ್ದವು.

**2. ಹೆಬ್ರೋನಿನಲ್ಲಿ ನೆಲೆಗೊಂಡ ಜೀವನ.**-ಈ ಅವಧಿಯ ಮುಖ್ಯ ಘಟನೆಗಳು ಇವಾಗಿವೆ:

*a. ಕಲ್ದೀಯರ ದಾಳಿ.*-ಏಲಾಮ್ಯ ರಾಜವಂಶವು ಕಲ್ದೀಯವನ್ನು ಆಳುತಿತ್ತು. ಮಹಾತ್ವಾಕಾಂಕ್ಷೆಯ ಸಂತತಿಯು ಯೊರ್ದನ್ ಕೊಳ್ಳದೊಳಗೆ ಜಯಿಸಲು ಒತ್ತಾಯಪಡಿಸಿತು. ಯೊರ್ದನಿನ ಪುಟ್ಟ ಅರಸುಗಳು ಹನ್ನೆರಡು ವರ್ಷಗಳವರೆಗೆ ನೊಗವನ್ನು ಸಹಿಸಿಕೊಂಡರು ಮತ್ತು ಆಮೇಲೆ ದಂಗೆಯೆದ್ದರು. ಕೆದೊರ್ಲಗೋಮರನು, ಕಲ್ದೀಯದ ಎಲಾಮೈಟ ರಾಜನು, ದಂಗೆಯನ್ನು ಹತ್ತಿಕ್ಕಿದನು ಮತ್ತು ಲೋಟವನ್ನು ಒಳಗೊಂಡು ಸೊದೋಮಿನ ಜನರನ್ನು ಸೆರೆಯಾಗಿ ಒಯ್ದನು. ಅಬ್ರಹಾಮನು, ತರಬೇತಿ ಹೊಂದಿದ ಮುನ್ನೂರಾ ಹದಿನೆಂಟು ಜನ ಸೇವಕರೊಂದಿಗೆ ಬೆನ್ನಟ್ಟಿ ಬಂಧಿತರನ್ನು ಬಿಡಿಸಿದನು. ತಾನು ಹಿಂದಿರುಗಿ ಬರುವಾಗ ಅಬ್ರಹಾಮನು ರಹಸ್ಯವಾದ ಯಾಜಕ - ಅರಸ ಮೇಲ್ಕಿಚೆದೇಕನನ್ನು ಸಂದರ್ಶಿಸಿದನು ಮತ್ತು ದಶಮಾಂಶವನ್ನು ಕೊಟ್ಟನು.

*b. ಹಾಗರಳೊಂದಿಗೆ ವಿವಾಹ.*-ವಾಗ್ದಾತ್ತ ಮಗುವಿನ ಜನನವಿಲ್ಲದೆ ವರುಷಗಳು ದಾಟಿ ಹೋದವು. ಅಬ್ರಹಾಮ ಮತ್ತು ಸಾರಳು ವಯಸ್ಸಿನಲ್ಲಿ ಬೆಳೆಯುತ್ತಾ ಹೋದರು. ಸಾರಳ ಸೂಚನೆಯಂತೆ, ಅಬ್ರಹಾಮನು ತಮ್ಮ ದಾಸಿಯಾದ ಹಾಗರಳನ್ನು ಎರಡನೆಯ ಹೆಂಡತಿಯಾಗಿ ತೆಗೆದುಕೊಂಡನು. ಆಕೆ ಇಸ್ಮಾಯೇಲನ ತಾಯಿಯಾದಳು ಮತ್ತು ಅರಬಿಯನ್‌ರ ಪೂರ್ವಿಕಳಾದಳು.

*c. ಸುನ್ನತಿಯ ನೇಮಕ.*-ಈಗ ಅಬ್ರಹಾಮನು ತೊಂಭತ್ತೊಂಭತ್ತು ವರ್ಷ ವಯಸ್ಸಿನವನಾಗಿದ್ದನು. ಸಾರಳು ಹತ್ತು ವರ್ಷಚಿಕ್ಕವಳು, ಒಡಂಬಡಿಕೆಯ ವಾಗ್ದಾನವು ಇನ್ನೂ ನೆರವೇರಿರಲಿಲ್ಲ; ಯಾಕಂದರೆ ವಾಗ್ದಾನವು ಸಾರಳ ಮುಖಾಂತರವಾಗಿತ್ತು ಮತ್ತು ಸಾರಳಿಗೆ ಗಂಡು ಮಗುವಿರಲಿಲ್ಲ. ಮತ್ತೊಮ್ಮೆ ದೇವರು ಕಾಣಿಸಿಕೊಂಡು, ಒಡಂಬಡಿಕೆಯನ್ನು ನವೀಕರಿಸಿದನು. ಎರಡು ಸಂಕೇತಗಳಿಂದ ಮುದ್ರಿಸಿದನು: (1) ಅವರ ಹೆಸರುಗಳು, ಮೂಲದಲ್ಲಿ ಅಬ್ರಾಮ (ಉನ್ನತ ತಂದೆ), ಮತ್ತು ಸಾರಾಯಿ (ಕಲಹಪ್ರಿಯಳು), ಎಂಬವುಗಳು ಅಬ್ರಹಾಮ (ದೊಡ್ಡ ಸಮೂಹದ ತಂದೆ), ಮತ್ತು ಸಾರಾ (ರಾಣಿ) ಎಂದು ಬದಲಾಯಿಸಲ್ಪಟ್ಟವು; (2) ಒಡಂಬಡಿಕೆಯ ಜನರಿಗೆ ಶಾಶ್ವತ ಆಜ್ಞೆಯಂತೆ ಸುನ್ನತಿ ಸಂಸ್ಕಾರವು ಕೊಡಲ್ಪಟ್ಟಿತು.

*d. ಸೊದೋಮಿನ ನಾಶನ.*-ಯೊರ್ದನಿನ ಸಮ ಭೂಮಿಯ ಮೇಲಿನ ಪಟ್ಟಣಗಳು ವ್ಯಭಿಚಾರ ಮಾಡುವ ಪ್ರವೃತ್ತಿಯ ಆಳದಲ್ಲಿ ಮುಳುಗಿ ಹೋಗಿದ್ದವು. ಅವುಗಳ ಮುಂದುವರಿಯುವಿಕೆಯು ಸುತ್ತಲಿನ ಜನಾಂಗಗಳಿಗೆ ಗಂಡಾಂತರಕಾರಿಯಾದದ್ದಾಗಿತ್ತು. ದೇವರು ಅವುಗಳ ನಾಶನವನ್ನು ಆಜ್ಞಾಪಿಸಿದನು

ಮತ್ತು ಅವುಗಳ ನಾಶನವನ್ನು ಅಬ್ರಹಾಮನಿಗೆ ಪ್ರಕಟಿಸಿದನು. ಅವನ ವಿಜ್ಞಾಪನೆಯು ಪಟ್ಟಣಗಳನ್ನು ರಕ್ಷಿಸದಿದ್ದರೂ ಅವನ ವಿಜ್ಞಾಪನೆಯು ಪೂರ್ಣವಾಗಿ ಕಳೆದು ಹೋಗಲಿಲ್ಲ. ಲೋಟನು ಉರಿಯೊಳಗಿಂದ, ಕೊಳ್ಳಿಯನ್ನು ಎಳೆದು ಕೊಂಡಂತೆ ಎಳೆಯಲ್ಪಟ್ಟನು, ಅವನ ಹೆಂಡತಿಯು ಆಶೆಗಳಿಂದ, ಹಿಂಜರಿಯುವಿಕೆಯಿಂದ, ಸೊದೋಮನ್ನು ನಾಶಪಡಿಸುತ್ತಿದ್ದ ಬೆಂಕಿ, ಗಂಧಕಗಳ ಬಿರುಗಾಳಿಯಲ್ಲಿ ಮುಳುಗಿ ಹೋದಳು. ಲೋಟನು ಜೋಗರಿಗೆ ತಪ್ಪಿಸಿಕೊಂಡು ಬಂದನು. ಮತ್ತು ತನ್ನ ಸ್ವಂತ ಹೆಣ್ಣುಮಕ್ಕಳಿಂದ ಮೋವಾಬ್ ಮತ್ತು ಅಮ್ಮೋನರ ತಂದೆಯಾದನು, ಅವರ ವಂಶಜರು ಇಬ್ರೀಯರಿಗೆ ಬಹಳಕಾಲದವರೆಗೆ ವಿರೋಧಿಗಳಾಗಿದ್ದರು.

*e. ಇಸಾಕನ ಜನನ ಮತ್ತು ಅರ್ಪಣೆ.*-ಈಗ ಅಬ್ರಹಾಮನು ಒಂದು ನೂರು ವರ್ಷ ವಯಸ್ಸಿನವನಾಗಿದ್ದನು, ಮತ್ತು ಸಾರಳು ತೊಂಭತ್ತು ವರ್ಷದವಳಾಗಿದ್ದಳು. ಇಪ್ಪತ್ತೈದು ವರ್ಷಗಳ ಅಲೆದಾಟ ಮತ್ತು ಕಾದುಕೊಳ್ಳುವಿಕೆಯ ನಂತರ ವಾಗ್ದಾನದ ಮೇಲೆ ನೆರವೇರುವಿಕೆಯ ಬೆಳಕು ಬೀಳುತ್ತದೆ. ಸಾರಳಿಗೆ ಒಬ್ಬ ಗಂಡುಮಗನು ಜನಿಸುತ್ತಾನೆ. ಅವನಿಗೆ ಇಸಾಕ ಎಂದು ಹೆಸರು ಇಡಲ್ಪಡುತ್ತದೆ. ಆದರೆ ಇನ್ನೂ ಕಠಿಣವಾದ ಶೋಧನೆ ಅವರಿಗಾಗಿ ಕಾದಿರುತ್ತದೆ. ಬಂಧುಬಳಗದವರ ಮತ್ತು ದೇಶದಮೇಲನ ಪ್ರೀತಿಯ ಮೇಲೆ ಅಬ್ರಹಾಮನ ನಂಬಿಕೆಯು ಜಯಸಾಧಿಸಿತು. ತನ್ನ ಸ್ವಂತ ಮಗನಿಗಾಗಿರುವ ಪ್ರೀತಿಯ ಮೇಲೆ ಅದು ಜಯ ಸಾಧಸಬಹುದೋ? ರಹಸ್ಯವಾದ ಸಂದೇಶವು ಅವನ ಕಿವಿಗಳ ಮೇಲೆ ಬೀಳುತ್ತದೆ, "ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು ಹೋಗಿ, ... ಸರ್ವಾಂಗ ಹೋಮವಾಗಿ ಅರ್ಪಿಸಬೇಕು"[2] ಅಂಥ ಆಜ್ಞೆಯು ನಮ್ಮ ನೈತಿಕ ಭಾವನೆಗೆ ಆಘಾತವನ್ನುಂಟು ಮಾಡಬಹುದು, ಇದು ಕರ್ತವ್ಯಗಳ ಘರ್ಷಣೆಯಂತೆ ತೋರುತ್ತದೆ. ಅಬ್ರಹಾಮನೊಂದಿಗೆ ಹಾಗಿರಲಿಲ್ಲ. ಮಾನವ ಯಜ್ಞವು ಸಾಮಾನ್ಯವಾಗಿತ್ತು; ಆ ಕಾಲವು ಅದರಿಂದ ತುಂಬಿಹೋಗಿತ್ತು, ಮತ್ತು ಅಬ್ರಹಾಮನು ಅವರೊಂದಿಗೆ ಪರಿಚಿತಯುಳ್ಳವನಾಗಿದ್ದನೆಂಬುದರಲ್ಲಿ ಸಂಶಯವಿಲ್ಲ. *ಅಲ್ಲಿ ಹೋರಾಟವೂ* ಇರಲಿಲ್ಲ, ಅದು ಒಂದು ಕಡೆಯಲ್ಲಿ ದೇವರ ಕರೆಯುವಿಕೆ ಮತ್ತು ಇನ್ನೊಂದು ಕಡೆ ಇಸಾಕನಿಗಾಗಿ ಅವನ ಪ್ರೀತಿ ಹಾಗೂ ಒಡಂಬಡಿಕೆಯ ವಾಗ್ದಾನದಲ್ಲಿ ನಿರೀಕ್ಷೆ ಇವುಗಳ ಮಧ್ಯದಲ್ಲಿತ್ತು. ಆ ವಾಗ್ದಾನಕ್ಕೆ ತನ್ನ ಪ್ರಾಣವನ್ನು ಬಲವಾಗಿ ಬಂಧಿಸಿಕೊಂಡಿದ್ದನು. ಇನ್ನೊಂದು ಸಲ ನಂಬಿಕೆಯು ಜಯಶಾಲಿಯಾಯಿತು (ಇಬ್ರಿಯ 11:17-19). ಇಲ್ಲಿ ಅಬ್ರಹಾಮನ ನಂಬಿಕೆ ಮತ್ತು ಅನುಭವದ ಅತ್ಯುನ್ನತ ಮಟ್ಟವನ್ನು ತಲುಪುತ್ತೇವೆ. ಅವನ ಮಗನು ಉಳಿಸಲ್ಪಟ್ಟನು; ಯಾಕಂದರೆ ದೇವರು ನಿಜವಾಗಿಯೂ ಅವನ ಯಜ್ಞದ ಅವಶ್ಯಕತೆಯುಳ್ಳವನಾಗಿರಲಿಲ್ಲ. ಇಸಾಕನು ಮದುವೆಯಾಗುವುದನ್ನು ನೋಡುವವರೆಗೆ ಪಿತೃವು ಜೀವಿಸಿದ್ದನು. ಮಕ್ಕಳು ತನ್ನ ಸುತ್ತ ಬೆಳೆಯುತ್ತಿರುವುದನ್ನು ನೋಡಿದನು. ಹೆಬ್ರೋನಿನ ಮಕ್ಪೇಲದ ಗವಿಯಲ್ಲಿ ಅವನು ಸಾರಳನ್ನು ಹೂಣಿಟ್ಟನು. ವಾಗ್ದತ್ತ ದೇಶದಲ್ಲಿ ಅವನು ಅದೊಂದೇ ಸ್ಥಳವನ್ನು ಹೊಂದಿಕೊಂಡಿದ್ದನು. ಅಲ್ಲಿ ಅವನೂ ಸಹ ಕಾನಾನಿನಲ್ಲಿ ಒಂದು ಶತಮಾನ ಯಾತ್ರಿಕನಾಗಿದ್ದ ತರುವಾಯ ಇಸಾಕ ಮತ್ತು ಇಷ್ಮಾಯೇಲರಿಂದ ಹೂಣಿಡಲ್ಪಟ್ಟನು.

ಜಗತ್ತಿನಲ್ಲಿ ಅಬ್ರಹಾಮರು ಇರುವುದಿಲ್ಲ. ನಿತ್ಯ ಗಂಡಾಂತರಗಳೊಂದಿಗೆ ಲೌಕಿಕ ಲಾಭವನ್ನು ಹಿಡಿದುಕೊಂಡಿರುವ ಅನೇಕ ಲೋಟರು ಇದ್ದಾರೆ. ಲೋಟ ಮತ್ತು ಅವನ ಕುಲವು ಮುಂಜಾನೆಯ ಮಂಜಿನಂತೆ ದಾಟಿಹೋಯಿತು; ಅಬ್ರಹಾಮ ಮತ್ತು ಅವನ ಸಂತತಿ ಸದಾಕಾಲಕ್ಕೂ ಜಗತ್ತಿನ ಅಂತಿಮಸ್ಥಿತಿಯನ್ನು ರೂಪಿಸಿರುತ್ತದೆ.

## II. ಇಸಾಕನ ಜೀವನ ಮತ್ತು ಸ್ವಭಾವ.

## (ಆದಿಕಾಂಡ 24:1-28:9.)

**1. ಇಸಾಕನ ಜೀವನದ ಗುಣಲಕ್ಷಣಗಳು.**-ಇಸಾಕನ ಜೀವನ ಕಥೆಯು ಬೇಗನೇ ಹೇಳಲ್ಪಟ್ಟಿತು. ಒಂದು ಕಡೆಯಲ್ಲಿ ಅವನ ತಂದೆಯ ಹಾಗೂ ಮತ್ತೊಂದು ಕಡೆಯಲ್ಲಿ ಅವನ ಮಗ ಯಾಕೋಬನ ಕಥೆಯೊಂದಿಗೆ ಸಮ್ಮಿಶ್ರವಾಗಿರುತ್ತದೆ. ಇಸಾಕನ ಜೀವಿ ತವು ಅಬ್ರಹಾಮನ ಎಪ್ಪತ್ತೈದು ವರ್ಷಗಳ ಮೇಲೆ ಮತ್ತು ಯಾಕೋಬನ ಒಂದನೂರಾ ಇಪ್ಪತ್ತು ವರ್ಷಗಳ ಮೇಲೆ ಒಂದನ್ನೊಂದು ಹಾಕುತ್ತವೆ. *ಅವನ* ಜೀವನದ ಪ್ರತಿಯೊಂದು ಘಟನೆಯು ಹೆಚ್ಚು ಯೋಗ್ಯವಾಗಿ *ಅವರಿಗೆ* ಸಂಬಂಧಿಸುತ್ತದೆ. ಒಬ್ಬ ಐತಿಹಾಸಿಕ ವ್ಯಕ್ತಿಯಾಗಿ, ಅವನು ಅವರಿಂದ ಹಿಂದೂಡಲ್ಪಡುತ್ತಾನೆ. ಶಾಂತಸ್ವಭಾವದ ಮತ್ತು ಸಮಾಧಾನ ಪ್ರೀತಿಸುವ ಅವನು ಅರ್ಪಿಸಲ್ಪಡಲು ತನ್ನನ್ನು ತನ್ನ ತಂದೆಗೆ ಒಪ್ಪಿಸಿಕೊಡುವಂಥದ್ದು, ಅವನ ತಾಯಿ ಜೀವಿಸಿದ್ದಾಗ ಆಕೆಯ ಪ್ರಭಾವವಾ ಗಿರಬೇಕು ಅನಂತರದಲ್ಲಿ ಅವನ ಹೆಂಡತಿಯ ಪ್ರಭಾವವಾಗಿರಬೇಕು. ಮತ್ತು ಫಿಲಿಷ್ಟಿಯರ ಕೂಡ ಬಾವಿಗಳಿಗಾಗಿ ಯುದ್ಧ ಮಾಡದೇ ಒಂದರ ನಂತರ ಒಂದು ಬಾವಿಯನ್ನು ಬಿಟ್ಟುಕೊಟ್ಟನು. ನೂರ ಎಂಭತ್ತು ವರ್ಷಗಳ ಅವನ ಸುಧೀರ್ಘ ಜೀವಿತವು ದಕ್ಷಿಣದಲ್ಲಿಯ ಹೆಬ್ರೋನಿನಲ್ಲಿ ಇಲ್ಲವೇ ಅದರ ಸಮೀಪದಲ್ಲಿ ಕಳೆಯಲ್ಪಟ್ಟಿತು. ಅವನು ಅಬ್ರಹಾಮನ ಬಲವಾದ ಪಡಿಯಚ್ಚು ಆಗಿರಲಿಲ್ಲ, ಇಲ್ಲವೇ ಯಾಕೋಬನ ಬಿರುಗಾಳಿಯಂಥ ಅನುಭವವುಳ್ಳವನೂ ಆಗಿರಲಿಲ್ಲ, ಇನ್ನೂ, ವಾಗ್ದಾನದ ಮಗನೂ ಒಡಂಬಡಿಕೆಯ ವಾಗ್ದಾನಗಳ ವಾರಸುದಾರನೂ ಆಗಿದ್ದನು. ಆ ಸಮಯದ ನಾಲ್ಕು ಜನ ಪಿತೃಗಳಲ್ಲಿ ಅವನದು ಗೌರವಾನ್ವಿತ ಸ್ಥಾನವಾಗಿತ್ತು. ಅವನು ಅಬ್ರಹಾಮನ ಶ್ರೇಷ್ಠ ವಿಶ್ವಾಸದಲ್ಲಿ ನಡೆಯುತ್ತಾನೆ, ಮತ್ತು ಅಬ್ರಹಾಮನ ಒಡಂಬಡಿಕೆಯನ್ನು ನವೀಕರಿಸಲು ದೇವರು ಪುನಃ ಪುನಃ ಅವನಿಗೆ ಕಾಣಿಸಿಕೊಳ್ಳುತ್ತಾನೆ.

**2. ಅವನ ವಿವಾಹ ಮತ್ತು ಕುಟುಂಬ.**-ಅಬ್ರಹಾಮನ ಸಹೋದರ ನಾಹೋರನು ಊರ್‌ದಿಂದ ಯೂಫ್ರೇಟೀಸ್‌ದ ಹಾರಾನಿನವರೆಗೆ ಕುಟುಂಬದೊಂದಿಗೆ ಬಂದಿರಬಹುದು ಇಲ್ಲವೇ ವಲಸೆಯಾಗಿ ಬಂದಿದ್ದಿರಬಹುದು. ಅಲ್ಲಿ ಅವನು ಉಳಿದುಕೊಂಡನು. ವಿಗ್ರಹಾರಧಕ ಕಾನಾನ್ಯರೊಂದಿಗೆ ಮದುವೆಯ ಸಂಬಂಧದ ಬಗ್ಗೆ ಭಯಪಟ್ಟು, ತನ್ನ ನಂಬಿಗಸ್ತ ಸೇವಕನನ್ನು ಹಾರಾನಿನಲ್ಲಿಯ ನಾಹೋರನ ಕುಟುಂಬಕ್ಕೆ ಕಳುಹಿಸುತ್ತಾನೆ, ಅಲ್ಲಿಂದ ಅವನು ಬೆತುವೇಲನ ಮಗಳಾದ ರೆಬೆಕ್ಕಳನ್ನು ಕರೆದುಕೊಂಡು ಬರುತ್ತಾನೆ. ಆಕೆ ಇಸಾಕನ ಹೆಂಡತಿ ಹಾಗೂ ಅವನ ಅವಳಿಮಕ್ಕಳಾದ ಏಸಾವ ಹಾಗೂ ಯಾಕೋಬ ತಾಯಿಯಾಗುತ್ತಾಳೆ.

## III. ಯಾಕೋಬನ ಚರಿತ್ರೆ.

## (ಆದಿಕಾಂಡ 27:1-49:33.)

ಯಾಕೋಬನ ಜೀವಿತದಲ್ಲಿ ಅವನ ಎರಡು ಹೆಸರುಗಳಿಗೆ ಸಂಬಂಧಿಸಿ ಮತ್ತು ಅವನ ಗುಣಲಕ್ಷಣದ ಎರಡು ಭಿನ್ನವಾದ ಹಂತಗಳಿಗೆ ಸಂಬಂಧಿಸಿ ಎರಡು ಅಧ್ಯಾಯಗಳಿರುತ್ತವೆ. ಮೊದಲನೆಯದಲ್ಲಿ, ಅವನು ಯಾಕೋಬನ (ಹಿಮ್ಮಡಿ ಹಿಡಿದವನು); ಎರಡನೆಯದರಲ್ಲಿ, ಅವನು ಇಸ್ರಾಯೇಲನು (ದೇವರ ಅರಸ ಕುಮಾರ) ಆದನು. ವಿಭಾಗಿಸುವ ರೇಖೆಯು ಪೆನೂವೇಲ್, ಅಲ್ಲಿ ಅವನು ದೇವದೂತನೊಂದಿಗೆ ಹೋರಾಡಿದನು ಹಾಗೂ ಜಯಿಸಿದನು ಮತ್ತು ಜಯಶಾಲಿಯೂ ಆದನು. ಕ್ರೈಸ್ತ

ಮಾರ್ಪಡುವಿಕೆಗೆ ಅಷ್ಟು ಹೋಲುವಷ್ಟು ಬೇರೆಯಾವ ಪಿತೃವಿನ ಜೀವಿತವು ಏನನ್ನೂ ಪ್ರದರ್ಶಿಸುವುದಿಲ್ಲ. ಮೊದಲಿಂದ ಕೊನೆಯವರೆಗೆ, ಇತರರು ನಂಬಿಕೆಯ ಜೀವಿತ ಜೀವಿಸಿದರು. ಆದರೆ ರಾಜಕುಮಾರನಾದ ಇಸ್ರಾಯೇಲನು ಹಿಮ್ಮಡಿಹಿಡಿಯುವವನಾದ ಯಾಕೋಬನಿಂದ ತೀವ್ರವಾಗಿ ಭಿನ್ನವಾದ ಮನುಷ್ಯನಾಗಿದ್ದನು.

**1. ಹಿಮ್ಮಡಿ ಹಿಡಿಯುವವನಾದ ಯಾಕೋಬ** (ಆದಿಕಾಂಡ 27:1-32:32).-*a. ಅವನ ಹೆಸರು.*-ಅವನ ಜನನದ ಒಂದು ಘಟನೆಯಿಂದ ಅವನಿಗೆ ಯಾಕೋಬ ಎಂಬ ಹೆಸರು ಕೊಡಲ್ಪಟ್ಟಿತು: ಹಿಮ್ಮಡಿ ಹಿಡಿಯುವವನು, ಇನ್ನೊಬ್ಬನಿಗೆ ಎಡವಿಬೀಳುವವನು, ಮೋಸ ಗಾರನು. ಅವನು ಚಿಕ್ಕವನಾಗಿದ್ದರೂ, ಆಯ್ಕೆಯಾದ ಸಂತತಿ ಮತ್ತು ಒಡಂಬಡಿಕೆಯು ಯಾಕೋಬನ ಮುಖಾಂತರ ಆಗಬೇಕಾಗಿದ್ದವು; ಆದುದರಿಂದ, ಅವನ ಜನನದಲ್ಲಿ, "ಹಿರಿಯದು ಕಿರಿಯದಕ್ಕೆ ಸೇವೆ ಮಾಡುವುದು"[3] ಎಂದು ಮುಂತಿಳಿಸಲ್ಪಟ್ಟಿತು.

*b. ಅನ್ಯಾಯದಿಂದ ತೆಗೆದುಕೊಂಡ ಚೊಚ್ಚಲ ತನದ ಹಕ್ಕು.*-ಏಸಾವನು ಬೇಟೆಗಾರನು; ಯಾಕೋಬನು "ಮೌನ" ಮನುಷ್ಯನು ಮತ್ತು ತೋಟಗಾರನು. ಏಸಾವನು ಬೇಟೆಯಿಂದ ದಣಿದು ಬಂದನು, ಯಾಕೋಬನ ರುಚಿ ಪದಾರ್ಥದ ಪಾಲಿಗಾಗಿ ತನ್ನ ಚೊಚ್ಚಲ ತನದ ಹಕ್ಕನ್ನು ಕೊಡಲು ಸಿದ್ಧನಾದನು. ಹೀಗೆ ಕ್ಷಣಿಕ ತೃಪ್ತಿಗಾಗಿ ಒಡಂಬಡಿಕೆಯ ಆಶೀರ್ವಾದವನ್ನು ತೂರಿಬಿಟ್ಟನು. ಒಂದು ಬಾಳಿಕೆಬರುವ ಜನಾಂಗವನ್ನು ಇಲ್ಲವೇ ಒಂದು ಘನವಾದ ಆತ್ಮಿಕ ಧರ್ಮವನ್ನು ಸ್ಥಾಪಿಸುವುದಕ್ಕೆ ಅಂಥ ವ್ಯಕ್ತಿಯು ಯೋಗ್ಯನಲ್ಲ. "ಮೌನ" ವಾಗಿದ್ದ ಯಾಕೋಬನು ಚೊಚ್ಚಲತನದ ಹಕ್ಕನ್ನು ಮತ್ತು ಒಡಂಬಡಿಕೆಯ ವಾಗ್ದಾನವನ್ನು ಹೊಂದಿಕೊಂಡನು, ಆದರೆ ಕೀಳು ಭಾವನೆಯಿಂದ ಅವುಗಳನ್ನು ತನ್ನ ಬಳಲಿದ ಸಹೋದರನಿಂದ ಕಿತ್ತು ಕೊಂಡನು.

*c. ಕದ್ದುಕೊಂಡ ಆಶೀರ್ವಾದ.*-ವರ್ಷಗಳು ದಾಟಿದವು. ಪಿತೃವಿನ ಆಶೀರ್ವಾದವನ್ನು ಕೊಡುವ ಸಮಯವು ವಯಸ್ಸಾದ ಇಸಾಕನಿಗೆ ಬಂದಿತು. ಬಾಲಕರ ಜನನದ ಸಮಯದಲ್ಲಿ ವ್ಯಕ್ತಪಡಿಸಿದ ದೈವಿಕ ಉದ್ದೇಶಕ್ಕೆ ವಿರುದ್ಧವಾಗಿ; ಅವನು ಏಸಾವನಿಗೆ ಅದನ್ನು ಕೊಡಲು ತೀರ್ಮಾನಿಸಿಕೊಂಡನು. ಆದರೆ ರೆಬೆಕ್ಕಳು ನಿದ್ರೆ ಹೋಗಿರಲಿಲ್ಲ. ಆಕೆ ಒಂದು ವಂಚನೆಯ ಕಾರ್ಯವನ್ನು ಸೂಚಿಸುತ್ತಾಳೆ, ಮತ್ತು ಯಾಕೋಬನು ತನ್ನ ಹೆಸರಿಗೆ ತಕ್ಕಂತೆ, ಆಕೆಯ ಯೋಜನೆಗೆ ತನ್ನನ್ನು ಒಪ್ಪಿಸಿಕೊಡುತ್ತಾನೆ. ಕುಯುಕ್ತಿಯು ಯಶಸ್ವಿಯಾಗುತ್ತದೆ, ಮಂದ ದೃಷ್ಟಿಯ ಇಸಾಕನು ಮತ್ತು ಹಾಜರಿಲ್ಲದ ಏಸಾವನು ಮೋಸಗೊಳಿಸಲ್ಪಡುತ್ತಾರೆ, ಮತ್ತು ಪಿತೃವಿನ ಹಸ್ತಗಳು ಪುರಾತನ ಆಶೀರ್ವಾದದಲ್ಲಿ ಯಾಕೋಬನ ತಲೆಯ ಮೇಲೆ ಇಡಲ್ಪಡುತ್ತವೆ.

*d. ಹಾರಾನಿಗೆ ಓಡಿಹೋದದ್ದು.*-ಯಾಕೋಬನ ಪಾಪದ ಮೊದಲನೆಯ ಪರಿಣಾಮವು ಅವನನ್ನು ಅವನು ಮೋಸಪಡಿಸಿದ ತಂದೆಯಿಂದ, ಅವನು ಮೋಸ ಪಡಿಸಿದ ಸಹೋದ ರನಿಂದ, ಮತ್ತು ಅವನ ಅಪರಾಧದ ಮೆಚ್ಚಿಕೆಯ ಭಾಗಿಯಾದ ರೆಬೆಕ್ಕಳಿಂದ ದೂರ ಓಡಿಸುವುದು ಆಗಿತ್ತು. ಏಸಾವನು ಅವನ ಪ್ರಾಣತೆಗೆಯಲು ನೋಡಿದನು. ರೆಬೆಕ್ಕಳ ಸಲಹೆಯಂತೆ, ಇಸಾಕನು ಯಾಕೋಬನನ್ನು ಹಾರಾನಿನಲ್ಲಿಯ ಆಕೆಯ ಬಂಧುಗಳಲ್ಲಿ ಹೆಂಡತಿಯನ್ನು ಹುಡುಕಿಕೊಳ್ಳಲು ಕಳುಹಿಸುತ್ತಾಳೆ. ಅದು ದುಃಖಕರವಾದ ಪಲಾಯನವಾಗಿತ್ತು. - ಹಿಂದೆ, ಬಾಲ್ಯಪ್ರಾಯದ ಸ್ಮರಣೆಗಳು, ತನ್ನ ಕೀಳುತನದ ನೆರಳುಗಳು, ಏಸಾವನ ಪ್ರತೀಕಾರದ ಭೂತ; ಮುಂದೆ, ಏನೆಂಬುದನ್ನು ದೇವರು ಮಾತ್ರವೇ ತಿಳಿದಿರುತ್ತಾನೆ. ರಾತ್ರಿ ಬರುತ್ತದೆ. ನಕ್ಷತ್ರಗಳ ಕೆಳಗೆ ಮಲಗಿಕೊಳ್ಳುವುದಕ್ಕಾಗಿ ಬಿದ್ದುಕೊಳ್ಳುತ್ತಾನೆ. ದಿನದ ವಿಚಾರಗಳಿಂದ ರಾತ್ರಿಯ ಕನಸುಗಳು ರೂಪ ತೆಗೆದುಕೊಳ್ಳುತ್ತವೆ ಅವನು ದೇವರನ್ನು

*ಸಂಪೂರ್ಣವಾಗಿ* ಮರೆತು ಬಿಟ್ಟಿರಲಿಲ್ಲ; ಇಲ್ಲವೇ ದೇವರಿಂದಲೂ ಅವನು ಮರೆಯಲ್ಪಟ್ಟಿರಲಿಲ್ಲ. ನಿಚ್ಚಣಿಕೆಯ ದರ್ಶನದಲ್ಲಿ ದೇವರು ತನ್ನನ್ನು ಅಬ್ರಹಾಮನ ದೇವರು, ಇಸಾಕನ ದೇವರು, ಒಡಂಬಡಿಕೆಯ ದೇವರು ಎಂಬಂತೆ ಪ್ರಕಟಪಡಿಸಿಕೊಳ್ಳುತ್ತಾನೆ ಮತ್ತು ಬಡ, ಸುಳ್ಳುಗಾರನಾದ, ಓಡಿ ಹೋಗುತ್ತಿರುವ ಯಾಕೋಬನಿಗೆ ಅದರ ದೂರದಲ್ಲಿರುವ ಒದಗಿಸುವಿಕೆಗಳನ್ನು ನವೀಕರಿಸುತ್ತಾನೆ. ಭಯಪಟ್ಟು, ದೀನತೆಯಿಂದ, ಯಾಕೋಬನು ಪ್ರಾತಃಕಾಲದಲ್ಲಿ ಏಳುತ್ತಾನೆ, ತನ್ನ ತಲೆಗಿಂಬಿನ ಕಲ್ಲನ್ನು ನಿಲ್ಲಿಸುತ್ತಾನೆ, ಅದಕ್ಕೆ ಬೆತ್ - ಎಲ್, ದೇವರ ಮನೆ ಎಂದು ಹೆಸರಿಡುತ್ತಾನೆ ಮತ್ತು ಹರಕೆ ಹೊತ್ತುಕೊಳ್ಳುತ್ತಾನೆ. ಯಾಕೋಬನಂತೆ ಒದಗಿಸುವಿಕೆಯಿದ್ದರೂ, ಯೆಹೋವನು ಅವನ ದೇವರಾಗಿರುವನು.

*e. ಹಾರಾನಿನಲ್ಲಿ ಜೀವನ.*-ಹಾರಾನಿನಲ್ಲಿ ಯಾಕೋಬನು ತನಗೆ ಸರಿಯಾದ ತನ್ನ ಮಾವ ಲಾಬಾನನ್ನು ಭೇಟಿಯಾಗುತ್ತಾನೆ. ಬಾವಿಯ ಬಳಿಯಲ್ಲಿ ತನ್ನ ಪ್ರಥಮ ಭೇಟಿಯಲ್ಲಿ ಪ್ರೀತಿಯಲ್ಲಿ ಬಿದ್ದ ರಾಹೇಲಳನ್ನು ಯಾಕೋಬನು ತೆಗೆದುಕೊಳ್ಳುವನೆಂದು ತಿಳಿದ ಲಾಬಾನನು ಅವನಿಗೆ ತನ್ನ ಹಿರಿಯ ಮಗಳನ್ನು, ಲೇಯಳನ್ನು ಮೊದಲು ಮದುವೆ ಮಾಡಿಕೊಟ್ಟನು. ಹೀಗೆ ಇಪ್ಪತ್ತು ವರ್ಷಗಳು ದಾಟಿಹೋದವು. ಕೊನೆಗೆ, ದೊಡ್ಡ ಆಸ್ತಿಯೊಂದಿಗೆ ಮತ್ತು ಅಸಂಖ್ಯಾತ ಕುಟುಂಬದವರೊಂದಿಗೆ, ಅವನು ತನ್ನ ಹಳೆಯ ಮನೆಯ ಕಡೆಗೆ ತನ್ನ ಮುಖ ತಿರುಗಿಸುತ್ತಾನೆ. ಅವನು ಕಾನಾನಿನ ಪೂರ್ವದ ಗಡಿಗಳಿಗೆ ಸಮೀಪಿಸಿದಾಗ, ತನ್ನನ್ನು ಸಂದರ್ಶಿಸಲಿಕ್ಕೆ ಏಸಾವನು ನಾಲ್ಕುನೂರು ಜನರೊಂದಿಗೆ ಬರುತ್ತಿದ್ದಾನೆಂದು ಕೇಳಿದನು. ಇನ್ನೊಂದು ಸಲ ಅವನ ಸ್ವಂತ ಪಾಪಗಳ ಮತ್ತು ತನ್ನ ಸಹೋದರನ ಪ್ರತೀಕಾರದ ಭೂತವು ಅವನ ಮುಂದೆ ಎದ್ದು ಬರುತ್ತದೆ. ಅಯೋಗ್ಯತೆಯ ಮತ್ತು ಬಲಹೀನತೆಯ ಭಾವನೆಯು ಅವನ ಪ್ರಾಣವನ್ನು ಹಿಂಡುತ್ತದೆ. ಏಸಾವನನ್ನು ಸಮಾಧಾನ ಪಡಿಸಲು ಕಾಣಿಕೆಗಳ ನಂತರ ಕಾಣಿಕೆಗಳು ಕಳುಹಿಸಲ್ಪಡುತ್ತದೆ. ಕುಟುಂಬವು ಯಬ್ಬೋಕ್ ಹೊಳೆಯನ್ನು ದಾಟಿಹೋಗುತ್ತದೆ, ಯಾಕೋಬನು ಪೆನೂವೇಲಿನಲ್ಲಿ ಒಬ್ಬನೇ ಉಳಿದುಕೊಂಡನು. ಆಗ ಅವನು ರಾತ್ರಿಯೆಲ್ಲಾ ಯೆಹೋವನ ರಹಸ್ಯವಾದ ಸಂದೇಶ ವಾಹಕನೊಂದಿಗೆ ಹೋರಾಡಿದನು, ಕೊನೆಗೆ ಕತ್ತಲೆಯು ಅದೃಶ್ಯವಾಗಿ ಹೋಯಿತು; ದಿನವು ಉದಯವಾಯಿತು; ಸ್ವಯಂಚಿತ್ತದ ಯಾಕೋಬನು ಒಪ್ಪಿಸಿಕೊಟ್ಟನು; *ಆಗ* ಆಶಿಸಿದ ಆಶೀರ್ವಾದವನ್ನು ಗೆದ್ದುಕೊಂಡನು, ಮತ್ತು ಮೋಸಗಾರನಾದ ಯಾಕೋಬನು ಇಸ್ರಾಯೇಲನಾಗಿ ಮಾರ್ಪಡಿಸಲ್ಪಟ್ಟನು.

**2. ರಾಜಪುತ್ರ ಇಸ್ರಾಯೇಲನು.**-ಅಂದಿನಿಂದ ಯಾಕೋಬನು ನೂತನ ಮನುಷ್ಯನು. ಸಹೋದರರು ಸಂದರ್ಶಿಸಿದರು ಮತ್ತು ಸಮಾಧಾನದಲ್ಲಿ ಅಗಲಿಹೋದರು. ಬಹಳ ಸಮಯದ ನಂತರ, ಅವರು ತಮ್ಮ ತಂದೆಯ ಹೂಣಿಡುವಿಕೆಯಲ್ಲಿ ಒಂದುಗೂಡಿದರು. ದೇವರ ಕರೆಯುವಿಕೆಯಂತೆ, ಇಸ್ರಾಯೇಲನು ಬೇತೇಲಿಗೆ ಯಾತ್ರಿಕನಾಗಿ ಹೋದನು. ಅವನ ಪ್ರೀತಿಯ ಹೆಂಡತಿ ರಾಹೇಲಳು ಬೇತ್ಲೆಹೇಮಿನ ಸಮೀಪದಲ್ಲಿ ಬೆನ್ಯಾಮೀನನ ಜನನದ ಸಮಯದಲ್ಲಿ ತೀರಿಹೋದಳು. ಅವನ ಗಂಡುಮಕ್ಕಳು ತಮ್ಮ ಹಿಂಸಾಚಾರದಿಂದ ಅವನನ್ನು ನೋಯಿಸಿದರು. ಪ್ರೀತಿಯ ರಾಹೇಲಳ ಪ್ರೀತಿಯ ಮಗ ಯೋಸೇಫನು ಇಪ್ಪತ್ತು ವರ್ಷಗಳವರೆಗೆ ಅವನಿಂದ ಕಳೆದು ಹೋದನು. ಐಗುಪ್ತದ ವಿಚಿತ್ರ ಅಧಿಕಾರಿಯಿಂದ ಬೆನ್ಯಾಮೀನನು ಕೇಳಲ್ಪಟ್ಟನು. ಆದರೆ ಈ ಎಲ್ಲಾ ಕತ್ತಲೆಯೊಳಗಿಂದ ಇಸ್ರಾಯೇಲನು ಯೆಹೋವನ ಹಸ್ತವು ಹೊರಟುಹೋಗುವಂತೆ ಬಿಡಲಿಲ್ಲ. ಈ ಅವಧಿಯಲ್ಲಿ, ಎಲ್ಲಾ ಕಡೆಗಳಲ್ಲಿಯೂ, ಅವನ ಬಲಿಪೀಠಗಳನ್ನು ಕಟ್ಟಿಸಿದನು ಮತ್ತು ಅಬ್ರಹಾಮನ ಮತ್ತು ಇಸಾಕನ ದೇವರ ಒಡಂಬಡಿಕೆಯನ್ನು ಜ್ಞಾಪಿಸಿಕೊಂಡನು. ಸೆರೆವಾಸ ಮತ್ತು ಸಂಕಷ್ಟ ಹಾಗೂ ಒಡಂಬಡಿಕೆಯ ನಿರೀಕ್ಷೆ ಇವು ಅವನ ಗುಣಲಕ್ಷಣದ

ಮೇಲೆ ತಮ್ಮ ಕಾರ್ಯಮಾಡಿದವು. ಯಾಕೋಬನು ಇಸ್ರಾಯೇಲನಾದನು. ಮತ್ತು ಇಸ್ರಾಯೇಲನು ಸುಂದರವಾದ ವಯಸ್ಸಿನವನು ಪರಿಪಕ್ವವಾದವನು ಆದನು. ಕೊನೆಗೆ ಮೋಡಗಳು ಕರಗಿದವು. ಯೋಸೇಫ ಮತ್ತು ಬೆನ್ಯಾಮೀನ್ಯರು ಅವನಿಗೆ ಪುನಃ ಹಿಂದಿರುಗಿಕೊಡಲ್ಪಟ್ಟರು. ಜೀವನದ ಸೂರ್ಯಾಸ್ತವು ಐಗುಪ್ತದಲ್ಲಿ ಸಮಾಧಾನದಿಂದ ಆಯಿತು, ಮತ್ತು ಅವನ ಎಲುಬುಗಳು ಹೆಬ್ರೋನಿನಲ್ಲಿ ಅವನ ತಂದೆಯ ಎಲುಬುಗ ಳೊಂದಿಗೆ ವಿಶ್ರಾಂತಿಪಡೆದವು.

## IV. ಯೋಸೇಫನ ಚರಿತ್ರೆ.

### (ಆದಿಕಾಂಡ 37:1-50:26.)

**ಪೀಠಿಕೆ.**-ಇಬ್ರಿಯ ಜನಾಂಗಕ್ಕೆ ಯೋಸೇಫನ ಸಂಬಂಧವು ಅಬ್ರಹಾಮನ, ಇಸಾಕನ ಮತ್ತು ಯಾಕೋಬನ ಸಂಬಂಧಕ್ಕಿಂತ ಭಿನ್ನವಾಗಿರುತ್ತದೆ. ಅವರು ಇಡೀ ಒಡಂಬಡಿಕೆಯ ಜನಾಂಗದ ಪೂರ್ವಜರಾಗಿದ್ದರು; ಅವರು ಕೇವಲ ಮೂಲಜನಾಂಗ ವಿಸ್ತರಿಸಿದ ಇಸ್ರಾಯೇಲನ ಹನ್ನೆರಡು ಜನ ಮಕ್ಕಳಲ್ಲಿ ಕೇವಲ ಒಬ್ಬನಾಗಿದ್ದನು. ಮುಂದಿನ ಜನಾಂಗವು ತನ್ನನ್ನು ಇಸ್ರಾಯೇಲ ಎಂದು ಕರೆದುಕೊಳ್ಳಬಹುದು, ಆದರೆ ಯೋಸೇಫ ಎಂದಲ್ಲ. ಯೋಸೇಫನು ಒಡಂಬಡಿಕೆಯ ಜನಾಂಗದ ಮುಖ್ಯಸ್ಥನಾಗಿರಲಿಲ್ಲ, ಮತ್ತು ದೇವರು ಒಡಂಬಡಿಕೆಯನ್ನು ನವೀಕರಿಸುವುದಕ್ಕಾಗಿ ಹಿರಿಯ ಪಿತೃಗಳಿಗೆ ಕಾಣಿಸಿ ಕೊಂಡಂತೆ ಅವನಿಗೆ ಕಾಣಿಸಿಕೊಳ್ಳಲಿಲ್ಲ. ಅವನು ಮತ್ತು ಅವನ ಸಹೋದರರು ಇನ್ನೂ ಪಿತೃಗಳ ಕಾಲಾವಧಿಗೆ ಸೇರಿದವರಾಗಿದ್ದರು, ಮತ್ತು ಪಿತೃಗಳೊಂದಿಗೆ ವರ್ಗೀ ಕರಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 7:8, 9). ಯೋಸೇಫನ ಕಥೆಯು ಬಹಳವಾಗಿ ಮನಕರಗಿಸುವಂಥದ್ದು, ಅವನ ಗುಣಲಕ್ಷಣವು ಹಳೇ ಒಡಂಬಡಿಕೆಯಲ್ಲಿ ಅತ್ಯುತ್ತಮ ವಾದದ್ದು, ಹಿರಿಯ ಪಿತೃಗಳ ಕೆಲವು ಉತ್ತಮವಾದ ಲಕ್ಷಣಗಳು ಅವನಲ್ಲಿ ಕೂಡಿರುತ್ತವೆ: ಅಬ್ರಹಾಮನ ಬಲ ಮತ್ತು ತೀರ್ಮಾನ, ಇಸಾಕನ ತಾಳ್ಮೆ ಮತ್ತು ದಯಾಶೀಲತೆ, ಯಾಕೋಬನ ಮೃದುವಾದ ಮಮತೆ, ಅವರೆಲ್ಲರ ನಂಬಿಕೆ. ಅವನ ಜೀವನವನ್ನು ಎರಡು ಅಧ್ಯಾಯಗಳಲ್ಲಿ ವಿಭಾಗಿಸಬಹುದು: (1) ಕಾನಾನಿನಲ್ಲಿ ಅವನ ಯೌವನ; (2) ಐಗುಪ್ತದಲ್ಲಿ ಅವನ ಪ್ರಾಯ.

**1. ಕಾನಾನಿನಲ್ಲಿ ಅವನ ಯೌವನ.**-ಈ ಅವಧಿಯ ಘಟನೆಗಳು ಎರಡು ಸಂಗತಿಗಳಿಂದ ರೂಪಿಸಲ್ಪಟ್ಟಿವೆ.:

*a. ಅವನ ತಂದೆಯ ಪಕ್ಷಪಾತ.*-ಅವನು ಮುದಿ ತಂದೆಯ ಒಬ್ಬ ಮಗನು, ರಾಹೇಲಳ ಮೊದಲ ಮಗನು, ಅವನನ್ನು ಯಾಕೋಬನು ತನ್ನ ನಿಜವಾದ ಹೆಂಡತಿಯ ಮಗನಂತೆ ನೋಡಿ ತನ್ನ ಪ್ರಥಮ ಪ್ರೀತಿಯನ್ನು ಕೊಟ್ಟನು. ಯೋಸೇಫನ ಪ್ರೀತಿಸುವ ಗುಣಲಕ್ಷಣವೇ ಇನ್ನೊಂದು ಕಾರಣವಾಗಿರುವುದೆಂಬದರಲ್ಲಿ ಸಂಶಯವಿಲ್ಲ. ಯಾಕೋಬನ ಪ್ರೀತಿಯು ವಿವಿಧ ವಿಧಗಳಲ್ಲಿ ತೋರಿಸಲ್ಪಟ್ಟಿತು; ರಾಜಕುಮಾರರು ಧರಿಸುವಂಥ ಅನೇಕ ಬಣ್ಣಗಳ (ಇಲ್ಲವೇ ಉದ್ದವಾದ ತೋಳುಗಳ) ನಿಲುವಂಗಿಯು ಗಮನಾರ್ಹವಾದ ದ್ದಾಗಿದೆ - ಇದು ಒಂದು ಸಂಕೇತ, ಬಹಶಃ ಜನ್ಮಸಿದ್ಧ ಹಕ್ಕನ್ನು ಅವನಿಗೆ ಕೈವರ್ತಿಸುವ ಅರ್ಥವುಳ್ಳವನಾಗಿದ್ದಿರಬಹುದು. ಅದರ ಪರಿಣಾಮವು ಬೇಗನೇ ಹಿರಿಯ ಸಹೋದರರ ಮತ್ಸರದಲ್ಲಿ ಕಾಣಬಂದಿತು. ಅದು ಯೋಸೇಫನನ್ನು ಹಾಳುಮಾಡಲಿಲ್ಲ ಎಂಬುದು ಸ್ವಭಾವದ ವಿಶಿಷ್ಟ ಬಲಕ್ಕೆ ರುಜುವಾತಾಗಿದೆ, ಯಾಕಂದರೆ ಯಥೇಚ್ಛವಾಗಿ ತೊಡಗುವುದು ವೈಯಕ್ತಿಕತೆಗಿಂತ ಹೆಚ್ಚು ಗುಣಲಕ್ಷಣಗಳನ್ನು ಹಾಳುಮಾಡುತ್ತದೆ. ಅನಂತರದಲ್ಲಿ ತನ್ನ

ತಂದೆಯ ಡೇರೆಯ ಶಕ್ತಿಗುಂದಿದ ಸಮಯದಲ್ಲಿ ಅವನು ತೋರಿಸಿದ ಗಟ್ಟಿಮುಟ್ಟಾದ ಯೌವನವನ್ನು ಬೆಳಸಿಕೊಂಡಿದ್ದರೂ ಅದು ಸಂಶಯವುಳ್ಳದ್ದಾಗಿದೆ.

*b. ಅವನ ಸಹೋದರರ ದ್ವೇಷ.*-ಇದು ಯೋಸೇಫನ ಎರಡು ಕನಸುಗಳಿಂದ ತೀವ್ರಕೊಳಿಸಲ್ಪಟ್ಟಿತ್ತು. ಒಂದರಲ್ಲಿ ಅವನ ಸಿವುಡಿಗೆ ಅವರ ಸಿವುಡುಗಳು ಅಡ್ಡ ಬಿದ್ದವು; ಎರಡನೆಯದರಲ್ಲಿ ಸೂರ್ಯ, ಚಂದ್ರ ಮತ್ತು ಹನ್ನೊಂದು ನಕ್ಷತ್ರಗಳು ಅವನಿಗೆ ನಮಸ್ಕರಿಸಿದವು - ಅವನು ತನ್ನ ಚೊಚ್ಚಲುತನದ ಹಕ್ಕಿಗಾಗಿ ಮುನ್ನೋಡು ತ್ತಿರುವನೆಂಬುದಕ್ಕೆ ಅವನಿಗೆ ಹೆಚ್ಚಿನ ಪುರಾವೆಯಾಗಿತ್ತು. - ಹೊಟ್ಟೇಕಿಚ್ಚು ದ್ವೇಷವನ್ನು ಹುಟ್ಟಿಸುತ್ತದೆ; ದ್ವೇಷವು ಅಂಕುರದಲ್ಲಿ ಕೊಲೆಯಾಗಿದೆ. ಯೋಸೇಫನ ಸಹೋದರರು ತಮ್ಮ ಕುರಿಹಿಂಡುಗಳೊಂದಿಗೆ ಶೆಕೆಮಿನ ಸಮೀಪದಲ್ಲಿ ಇದ್ದಾಗ, ಯಾಕೋಬನು ಯೋಸೇಫನನ್ನು ಅವರ ಬಳಿಗೆ ಕಳುಹಿಸಿದಾಗ ಅವರಿಗೆ ಅವಕಾಶದೊರೆಯಿತು. "ಅಗೋ, ಆ ಕನಸಿನವನು ಬರುತ್ತಾನೆ; ನಾವು ಅವನನ್ನು ಕೊಂದುಹಾಕೋಣ ... ಆಗ ಅವನ ಕನಸುಗಳು ಏನಾಗುವವ್ರೋ ನೋಡೋಣ."[4] ರೂಬೇನನು ಸಮಯ ಕಳೆದು, ಅವನನ್ನು ಅವನ ತಂದೆಗೆ ಒಪ್ಪಿಸಲು ಯೋಚಿಸಿ, ಒಂದು ತಗ್ಗಿನೊಳಗೆ ಅವನನ್ನು ಹಾಕಬೇಕೆಂದು ಸೂಚಿಸಿದನು, ರೂಬೇನನು ಇಲ್ಲದಾಗ ಯೆಹೂದನ ಸಲಹೆಯಂತೆ, ಐಗುಪ್ತಕ್ಕೆ *ಪ್ರಯಾಣ ಮಾಡುತ್ತಿದ್ದ* ವ್ಯಾಪಾರಿಗಳಿಗೆ ಮಾರಿದರು. ದ್ವೇಷಿಸಿದ ನಿಲುವಂಗಿಯನ್ನು ಹೋತದ ರಕ್ತದಲ್ಲಿ ಅದ್ದಿ, ಯೋಸೇಫನು ಕಾಡುಮೃಗಗಳಿಗೆ ಆಹುತಿಯಾಗಿದ್ದಾನೆಂದು ಪ್ರೀತಿಯ ತಂದೆಯು ನಂಬುವಂತೆ ಮಾಡಿದರು, ಕುಟುಂಬದ ಅಪರಾಧ ಮತ್ತು ದುಃಖದ ದೃಶ್ಯದ ಮೇಲೆ ತೆರೆ ಬೀಳುತ್ತದೆ.

**2. ಐಗುಪ್ತದಲ್ಲಿ ಅವನ ಪ್ರಾಯ.**-*a. ಅವನ ಗುಲಾಮತನದ ಜೀವನ.*-ಫರೋಹನ ರಕ್ಷಕ, ಪೋಟೀಫರನ ಗುಲಾಮನಂತೆ ಅವನ ಸಾಮರ್ಥ್ಯ ಮತ್ತು ನಂಬಿಗಸ್ತಿಕೆಯು ಅವನ ಯಜಮಾನ ಮನೆತನಕ್ಕೆ ಮುಖ್ಯಸ್ಥನನ್ನಾಗಿ ಮಾಡಿತು. ಅವನ ಸದ್ಗುಣವೇ ಅವನ ನಾಶನದ ಭಯಹುಟ್ಟಿಸಿತು. ಪೋಟೀಫರನ ಹೆಂಡತಿಯು ಅವನ ಮೇಲೆ ಸುಳ್ಳು ಅಪ ವಾದ ಹೊರಿಸಿದಾಗ, ಅವನು ಸೆರೆಮನೆಯೊಳಗೆ ದೊಬ್ಬಲ್ಪಟ್ಟನು.

*b. ಅವನ ಸೆರೆಮನೆಯ ಜೀವನ.*-ಯೋಸೇಫನು ನಿರಾಶೆಯಲ್ಲಿ ಕುಳಿತುಕೊಳ್ಳುವ ಮನುಷ್ಯನಲ್ಲ, ಸೆರೆಮನೆಯ ಸರಳುಗಳ ಹಿಂದೆಯೂ ಶೂರನೂ ಸಹಾಯಕನೂ ಆಗಿ, ವಿಶ್ವಾಸದ ಸ್ಥಾನಕ್ಕೆ ಪುನಃ ಮೇಲೆರುತ್ತಾನೆ. ಇಬ್ಬರು ಜೊತೆ ಸೆರೆಯಾಳುಗಳ ಕನಸುಗಳ ಅರ್ಥ ಹೇಳುವದರಿಂದ, ಫರೋಹನ ಕನಸುಗಳ ಅರ್ಥವನ್ನು ಹೇಳಲಿಕ್ಕೆ ಕರೆಯಲ್ಪಡುತ್ತಾನೆ, ಅದು ಅವನು ಭೂಲೋಕದಲ್ಲಿ ಅತೀ ಹೆಮ್ಮೆಯುಳ್ಳ ರಾಜ್ಯದಲ್ಲಿ ರಾಜಕೀಯ ಅಧಿಕಾರಕ್ಕೆ ಹೆಜ್ಜೆಯಿಡುವಂತೆ ಮಾಡುತ್ತದೆ.

*c. ಅವನ ಆಸ್ಥಾನಿಕ ಜೀವನ.*-ಐಗುಪ್ತದ ರಾಜಪ್ರತಿನಿಧಿಯಾಗಿ ಯೋಸೇಫನು ಸಮೃದ್ಧಿಯ ಏಳುವರ್ಷಗಳಲ್ಲಿ, ಫರೋಹನ ಕನಸುಗಳಿಂದ ಮುಂತಿಳಿಸಲ್ಪಟ್ಟ ಮುಂದಿನ ಕ್ಷಾಮದ ಏಳು ವರ್ಷಗಳಿಗಾಗಿ ಧಾನ್ಯವನ್ನು ಸಂಗ್ರಹಿಸಿದನು. ಸಮೃದ್ಧಿಯ ವರ್ಷಗಳು ದಾಟಿಹೋದವು; ಕ್ಷಾಮದ ವರ್ಷಗಳು ಬಂದವು ಮತ್ತು ಅದರೊಂದಿಗೆ ಯೋಸೇಫನ ಸಹೋದರರು ಧಾನ್ಯಕ್ಕಾಗಿ ಬಂದರು. ಈಗ ಅವನಿಗೆ ಸದವಕಾಶ. ಅವನು ಅವರನ್ನು ಗೂಢಚಾರರೆಂದು ಹಿಡಿಯುತ್ತಾನೆ. ಸಿಮೆಯೋನನ್ನು ಒತ್ತೆಯಾಳಾಗಿ ಉಳಿಸುಕೊಂಡು, ಉಳಿದವರನ್ನು ಬಿಡುಗಡೆ ಮಾಡುತ್ತಾನೆ. ಆದರೆ ಅವರು ಬೆನ್ಯಾಮೀನನ್ನು ಕರಕೊಂಡು ಬರುವವರೆಗೆ ಅವರನ್ನು ನೋಡುವದನ್ನು ನಿರಾಕರಿಸುತ್ತಾನೆ. ಬೆನ್ಯಾಮೀ ನನನ್ನು ಬಿಟ್ಟುಕೊಡಲು ಪಿತೃವು ಮೊದಲು ನಿರಾಕರಿಸುತ್ತಾನೆ. ಹಸಿವೆಯು ಕಠಿಣ ಯಜಮಾನನಾಗಿದೆ, ಬಾಲಕನಿಗಾಗಿ ಯೆಹೂದನ ಜವಾಬ್ದಾರಿಕೆಯ ಭರವಸೆಯ

ಮೇಲೆ ಅವನು ಕೊನೆಗೆ ಒಪ್ಪಿಕೊಳ್ಳುತ್ತಾನೆ. ಅವರ ಎರಡನೆಯ ಸಂದರ್ಶನದಲ್ಲಿ, ಯೋಸೇಫನು ತನ್ನ ಪಾತ್ರೆಯನ್ನು ಬೆನ್ಯಾಮೀನನ ಚೀಲದಲ್ಲಿ ಇಡಿಸುತ್ತಾನೆ, ಮತ್ತು ಸಹೋದರರರ ಮೇಲೆ ಕಳ್ಳತನದ ಅಪರಾಧ ಹೊರಿಸುತ್ತಾನೆ. ಆಗ, ಮನಸ್ಸಾಕ್ಷಿಯು ಎಚ್ಚರಿಸಲ್ಪಟ್ಟಾಗ, ಅವರು ತಮ್ಮ ಅಪರಾಧವನ್ನು ಈ ಅವಗಡಗಳಿಗೆ ಸಂಬಂಧಿಸಲು ಸಿದ್ಧರಾದಾಗ, ಕೊನೆಗೆ, ಬೆನ್ಯಾಮೀನನ ಬದಲಾಗಿ ಯೆಹೂದನು ತಾನು ದಾಸನಾಗುವೆನೆಂದು ಮುಂದೆ ಬಂದಾಗ, ಯೋಸೇಫನು ಅವರಿಗೆ ತನ್ನ ಗುರುತು ಸಿಕ್ಕುವಂತೆ ಮಾಡಿದನು ಹಾಗೂ ಅವರ ಅಪರಾಧವನ್ನು ಉಚಿತವಾಗಿ ಕ್ಷಮಿಸಿದನು. ಯಾಕೋಬನು ಅಲ್ಲಿಗೆ ಕರತರಲ್ಪಟ್ಟನು. ಮತ್ತು ಈ ಅವಧಿಯು ಒಡಂಬಡಿಕೆಯ ಜನಾಂಗವು ಐಗುಪ್ತದಲ್ಲಿರುವುದರೊಂದಿಗೆ ಮುಕ್ತಾಯವಾಗುತ್ತದೆ. ಆದರೆ ಯೋಸೇಫನು ಐಗುಪ್ತದಲ್ಲಿ ಮರಣಹೊಂದಿ, ಹೂಣಲ್ಪಟ್ಟರೂ, ಅವನು ಸಾಯುವಾಗ ಕೊಟ್ಟ ಅಪ್ಪಣೆಯು (ಆದಿಕಾಂಡ 50:24, 25) ಒಡಂಬಡಿಕೆಯ ವಾಗ್ದಾನಗಳಲ್ಲಿ ಮತ್ತು ತನ್ನ ಜನರ ಭವಿಷ್ಯದಲ್ಲಿ ಅವನ ನಂಬಿಕೆಯು ಎಷ್ಟು ಸ್ಥಿರವಾಗಿತ್ತೆಂಬದನ್ನು ತೋರಿಸುತ್ತದೆ.

ಯೋಸೇಫನ ಗುಣಲಕ್ಷಣವು ಅಪೂರ್ವವಾದ ಪ್ರಮಾಣಿಕತೆಯಾಗಿತ್ತು. ಅವನು ಕಲ್ಪಿಸಬಹುದಾದ ಪ್ರತಿಯೊಂದು ಪರೀಕ್ಷೆಗೆ ಹಾಕಲ್ಪಟ್ಟನು: ತನ್ನ ತಂದೆಯ ಪಕ್ಷಪಾತ, ಸಹೋದರರಿಂದ ಮತ್ಸರ ಮತ್ತು ಅನ್ಯಾಯ, ಅಶುದ್ಧ ಸ್ತ್ರೀಯಿಂದ ಶೋಧನೆಗಳು, ಸದ್ಗುಣವು ಕೆಟ್ಟತನದಿಂದ ದಂಡನೆಯನ್ನು ಸಹಿಸುವುದು, ಪಕ್ಕನೇ ಗೌರವದ ಮತ್ತು ಅಧಿಕಾರದ ಸ್ಥಾನಕ್ಕೇರುವುದು, ಪ್ರತಿಯೊಂದು ತಪ್ಪಿಗೆ ಪ್ರತೀಕಾರ ತೆಗೆದುಕೊಳ್ಳುವ ಅವಕಾಶ - ಇವು ಅವನ ಜೀವನದ ಖಂಡಿತವಾದ ಅನುಭವಗಳಾಗಿದ್ದವು. ಇಷ್ಟು ಯಾವ ಮನುಷ್ಯನೂ ಪರೀಕ್ಷಿಸಲ್ಪಡಲಿಲ್ಲ; ಬೇರೆ ಯಾವನೂ ಅಷ್ಟು ಜಯಶಾಲಿಯಾಗಿರುವುದಿಲ್ಲ. ಮಾನವ ಕ್ಷಮಾಪಣೆಯ ಚರಿತ್ರೆಯಲ್ಲಿ ಅವನು ಅತ್ಯಂತ ಪ್ರಖ್ಯಾತ ಉದಾಹರಣೆ ಆಗಿದ್ದಾನೆ; ಅಬ್ರಹಾಮನು ತನ್ನ ವಿಶ್ವಾಸದಲ್ಲಿ ತಾನೇ ಅಷ್ಟು ಸಮನಾಗಿ ಜಯಶಾಲಿಯಾಗಿರಲಿಲ್ಲ, ಹಾಗಾದರೆ, ಯೋಸೇಫನಲ್ಲ ಆದರೆ ಅಬ್ರಹಾಮನು "ನಂಬಿಗಸ್ತರ ತಂದೆ" ಎಂದು ಗೌರವಿಸಲ್ಪಟ್ಟಿದ್ದಾನೆ? ಯಾಕಂದರೆ ಅವನು "ನಂಬಿಕೆಯ ಸಮುದ್ರಯಾನದ ಕೋಲಂಬಸ ನಾಗಿದ್ದನು." ಅಬ್ರಹಾಮನು ಅಪರಿಚಿತ ಸಮುದ್ರದಲ್ಲಿ, ತಿಳಿಯದ ದೇಶಕ್ಕೆ ಪ್ರಯಾಣ ಪ್ರಾರಂಭಿಸಿದನು. ಯೋಸೇಫನು ತನ್ನ ಪ್ರಮಾಣವನ್ನು ಅಬ್ರಹಾಮ, ಇಸಾಕ ಮತ್ತು ಯಾಕೋಬರು ಆಗಿದ್ದ ಮತ್ತು ಮಾಡಿದ್ದ ಎಲ್ಲವುಗಳ ಬೆಳಕಿನಲ್ಲಿ ಮಾಡಿದನು.

## V. ಯೋಬನ ಪುಸ್ತಕ.

ಈ ಯುಗಕ್ಕೆ ಯೋಬನ ಪುಸ್ತಕವು ಒಳಪಟ್ಟಿರುತ್ತದೆ. ಅನೇಕ ಶತಮಾನಗಳಿಂದ ಅಷ್ಟು ಬೇಗನೇ ಬರೆಯಲ್ಪಟ್ಟಿತು ಎಂಬುದಾಗಿ ಅಲ್ಲ; ಆದರೆ ಘಟನೆಗಳು, ದೃಶ್ಯಗಳು, ವಸ್ತ್ರಗಳು, ಇಡೀ ಸ್ವರ, ಇವು ಪಿತೃಗಳವು ಆಗಿವೆ. ಯೋಬನು ಪೂರ್ವ ದೇಶದ ಬಲವುಳ್ಳ ಪ್ರಮುಖನು. ಸೈತಾನನು ಅವನ ಆಸ್ತಿಗಳನ್ನು ಮತ್ತು ಮಕ್ಕಳನ್ನು ಅವನಿಂದ ತೆಗೆದು ಹಾಕಲು ಮತ್ತು ಅಸಹ್ಯವಾದ ರೋಗದಿಂದ ಪೀಡಿತನನ್ನಾಗಿ ಮಾಡಲು ದೇವರು ಅವನನ್ನು ಬಿಡುತ್ತಾನೆ.[5] ಅವನನ್ನು ಆದರಿಸಲಿಕ್ಕೆ ಮೂವರು ಸ್ನೇಹಿತರು ಬಂದರು. ಯೋಬ, ಅವನ ಮೂರು ಜನ ಸ್ನೇಹಿತರು, ಎಲೀಫಜ, ಬಿಲ್ದದ ಮತ್ತು ಚೋಫರ, ನೆರೆಯವನಾದ ಎಲೀಹು, ಮತ್ತು ಯೆಹೋವ ಇವರ ಮಧ್ಯದಲ್ಲಿಯ ಒಂದು ದೊಡ್ಡ ಪದ್ಯದ ಚರ್ಚೆಯನ್ನು ಈ ಪುಸ್ತಕವು ಒಳಗೊಂಡಿರುತ್ತದೆ. ಯೋಬನು ತನ್ನ ಪ್ರಾಮಾಣಿಕತೆಯನ್ನು ಕಾದುಕೊಂಡು ಹೋಗಿ

ದ್ದಾನೆ ಮತ್ತು ತನ್ನ ಹಿಂದಿನ ಸಮೃದ್ಧಿಗಿಂತ ಎರಡರಷ್ಟನ್ನು ಪುನಃ ಪಡೆದುಕೊಂಡನು. ಪುಸ್ತಕವು ಬಹುಶಃ ಪಿತೃಗಳ ಚರಿತ್ರೆಯನ್ನು ಆದರ್ಶವಾಗಿ ಮಾಡಿರುತ್ತದೆ. ಅದಕ್ಕೆ ಐತಿಹಾಸಿಕ ತಳಹದಿಯಿದೆ, ಪದ್ಯದ ವಿಸ್ತರಣೆ ಮತ್ತು ಅಲಂಕಾರಗಳೊಂದಿಗಿದೆ. ನಾಟಕೀಯ ಬೆಳವಣಿಗೆ ಮತ್ತು ಘಟನೆಗಳ ಸಂಬಂಧ, ಸ್ವಯಂ ಪ್ರೇರಿತ ಭಾಷಣ. ವಿಸ್ತರಣೆ ಮತ್ತು ಪದ್ಯವು ಈ ದೃಷ್ಟಿಕೋನವನ್ನು ತೋರಿಸುತ್ತವೆ. ಚರ್ಚೆಯ ವಿಷಯವು - ಕೆಡುಕಿನ ಸಮಸ್ಯೆ - ಗುಣಕ್ಕೆ ಆಪತ್ತಿನ ಸಂಬಂಧ; ಉದ್ದೇಶವು, ಜನರು *ನೋಡ* ಲಾರದ ಕಡೆಗೆ ನಂಬುವುದಕ್ಕೆ ಅವರನ್ನು ನಡಿಸುವುದು.

## ಟಿಪ್ಪಣಿ.

## ಪಿತೃಗಳ ಯುಗದ ಕೆಲವು ವಿಷೇಶ ಗುಣಲಕ್ಷಣಗಳು.

**1. ಅದು ದೇಶ ಸಂಚಾರ ಮಾಡುವವರದಾಗಿತ್ತು.**-ಅಬ್ರಹಾಮ, ಇಸಾಕ ಮತ್ತು ಯಾಕೋಬರು ಸ್ಥಾಪಕರಾಗಿದ್ದರು, ಮೆನೆಸ್, ನಿಮ್ರೋದ್ ಮತ್ತು ಅಶ್ಶೂರನಂತೆ ಪಟ್ಟಣಗಳ ಸ್ಥಾಪಕರಾಗಿರಲಿಲ್ಲ, ಆದರೆ ಒಂದು ಕುಲದ ಮತ್ತು ಒಂದು ವಿಶ್ವಾಸದ ಸ್ಥಾಪಕರಾಗಿದ್ದರು, ಅವರು ಡೇರೆಗಳಲ್ಲಿ ವಾಸಿಸಿದರು, ಅವರು ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಚಲಿಸಿದರು, ಆದಾಗ್ಯೂ ಅವರು ಗುರಿಯಿಲ್ಲದವರಾಗಿರಲಿಲ್ಲ ಇಲ್ಲವೇ ಕಾನೂನು ಇಲ್ಲದ ಸಂಚಾರಿಗಳಾಗಿರಲಿಲ್ಲ; ಅವರು *ಯಾತ್ರಿಕರಾಗಿದ್ದರು,* ದೇವರ ಕರೆಯುವಿಕೆಗೆ ತಕ್ಕಂತೆ ವಲಸೆಹೋಗುತ್ತಿದ್ದರು, ಘನವಾದ, ದೂರಕ್ಕೆ ತಲುಪುವ ಉದ್ದೇಶದಿಂದ ಪ್ರೇರೇಪಿಸಲ್ಪಡುತ್ತಿದ್ದರು.

**2. ಅದು ಪಿತೃಗಳದಾಗಿತ್ತು.**-ತಂದೆಯು *(a) ಕುಟುಂಬದ ನಾಯಕನಾಗಿದ್ದನು.* ಜೀವದ ಮತ್ತು ಮರಣದ ಬಲವು ಅವನಿಗಿತ್ತು. (ನೋಡಿರಿ ಆದಿಕಾಂಡ 22:10; 28:24.) *(b) ಮಿಲಿಟರಿ ಮುಖ್ಯಸ್ಥನಾಗಿದ್ದನು.* ಅಬ್ರಹಾಮನು ಮೆಸೊಪೊತಾಮಿಯನ್‌ರ ವಿರೋಧವಾಗಿ ದಂಡೆತ್ತಿ ಹೋದದ್ದರ ಮುಂದಾಳಾಗಿದ್ದನು. *(c) ಕುಟುಂಬದ ಯಾಜಕ.* ಅವನು ಯಜ್ಞವೇದಿಯನ್ನು ಕಟ್ಟಿ ಕುಟುಂಬಕ್ಕಾಗಿ ಯಜ್ಞ ಅರ್ಪಿಸುವವನಾಗಿದ್ದನು. *(d) ಕುಟುಂಬದ ಪ್ರವಾದಿ.* ಅವನಿಗೆ ಮತ್ತು ಅವನ ಮುಖಾಂತರ ದೇವರು ತನ್ನ ಚಿತ್ತವನ್ನು ಮತ್ತು ತನ್ನ ಉದ್ದೇಶಗಳನ್ನು ತಿಳಿಯಪಡಿಸುತ್ತಾನೆ.

**3. ದೇವರ ಬಗ್ಗೆ ಭಾವನೆಗಳು.**-ಪಿತೃಗಳ *(a)* ದೇವರ ಐಕ್ಯತೆಯ ಬಗ್ಗೆ *ದೃಢವಾಗಿ ನಂಬಿದರು.* ಬಹುದೇವಾತಾರಾಧನೆಯು ಇದ್ದುದರ ಗುರುತು ಇರುವುದಿಲ್ಲ. *(b) ದೇವರ ವ್ಯಕ್ತಿತ್ವ.*-ಬಹುದೇವತಾ ತತ್ವದ, ಐಗುಪ್ತದಲ್ಲಿ ಬಹಳವಾಗಿದ್ದ ನಿಸರ್ಗದ ಆರಾಧನೆಯ ಸ್ಪರ್ಶವಿರಲಿಲ್ಲ. *(c) ದೇವರ ವಿಶ್ವವ್ಯಾಪಕತೆ.*-ಆತನು ಇಡೀ ಲೋಕದ ದೇವರಾಗಿದ್ದಾನೆ (ಆದಿಕಾಂಡ 18:25); ಅಬ್ರಹಾಮ ಮತ್ತು ಇಸ್ರಾಯೇಲನ ದೇವರಂತೆ ಫರೋಹನ ದೇವರೂ ಆಗಿದ್ದಾನೆ; ಯೊರ್ದನಿನ ಮೇಲೆ ಅದರಂತೆ ಆತನು ನೈಲ ಮತ್ತು ಯೂಫ್ರೇಟೀಸ್ ಮೇಲೆಯೂ ಆಳುತ್ತಾನೆ. *(d) ದೇವರ ಪರಿಶುದ್ಧತೆ.* ಅನ್ಯ ದೇವತೆಗಳ ದುರ್ಗುಣಗಳಿಂದ ಆತನು ಎಂದೂ ಕೆಡಿಸಲ್ಪಟ್ಟಿರುವುದಿಲ್ಲ. ಇಡೀ ಲೋಕದ ನ್ಯಾಯಾಧೀಶನು ಸರಿಯಾದದ್ದನ್ನೇ ಮಾಡುತ್ತಾನೆ (ಆದಿಕಾಂಡ 18:25).

**4. ಆರಾಧನೆಯ ವಿಧಗಳು.**-ದೇವಾಲಯಗಳಾಗಲೀ ಇಲ್ಲವೇ ಹೇಳಲ್ಪಟ್ಟ ಹಬ್ಬಗಳಾಗಲೀ ಇರಲಿಲ್ಲ; ಸಬ್ಬತ್ತ ದಿನದ ಕುರುಹುಗಳಿರುವುದಿಲ್ಲ. ಅನಂತರದಲ್ಲಿ ಮೋಶೆಯ ಧರ್ಮಶಾಸ್ತ್ರವು ಏಳನೆಯ ದಿನದಂದು ದೇವರು ಸೃಷ್ಟಿಕಾರ್ಯದಿಂದ ವಿಶ್ರಾಂತಿ ಪಡೆದದ್ದನ್ನು ಆಧಾರಕೊಂಡಿರುತ್ತದೆ, ಮತ್ತು ಸಮಯದ ವಿಭಜನೆಯು ವಾರವಾರವಾಗಿ

ಮಾಡಿರುವುದರ ಗುರುತುಗಳಿರುತ್ತವೆ (ಆದಿಕಾಂಡ 8:10-12). ಒರಟಾದ ಯಜ್ಞವೇದಿಗಳೂ ಪ್ರಾಣಿ ಯಜ್ಞವೂ, ಪ್ರತಿಷ್ಠಿಸಿದ ಸ್ಮಾರಕಗಳೂ, ಹರಕೆಗಳೂ ತೀರ್ಥಯಾತ್ರೆಗಳೂ ಪ್ರಾರ್ಥನೆಗಳೂ ದಶಮಾಂಶವೂ ಮತ್ತು ಸುನ್ನತಿ ಆಚರಣೆಯೂ ಇದ್ದವು.

**5. ನಾಗರಿಕತೆಯ ಶ್ರೇಣಿ.**-ಪಿತೃಗಳು ಸಂಚಾರಿಗಳಾಗಿದ್ದರೂ, ಅವರು ಅನಾಗರಿಕರಾಗಿರಲಿಲ್ಲ, ಕಲ್ದೀಯದಲ್ಲಿ ಮತ್ತು ಐಗುಪ್ತದಲ್ಲಿ ಅವರು ಯುಗದ ಅತ್ಯುನ್ನತ ನಾಗರಿಕತೆಯೊಂದಿಗೆ ಸಂಪರ್ಕದಲ್ಲಿ ಬಂದರು. ಅವರು ಕುರುಬರಾಗಿದ್ದರು, ಆದಾಗ್ಯೂ ಒಕ್ಕಲುತನವನ್ನು ರೂಢಿಸಿಕೊಂಡಿದ್ದರು. ಅವರಲ್ಲಿ ಹಣ ಮತ್ತು ಒಡವೆಗಳಿದ್ದವು; ಯೆಹೂದನಲ್ಲಿ ಮುದ್ರೆಯುಂಗುರವಿತ್ತು; ಮತ್ತು ಯೋಸೇಫನಲ್ಲಿ ರಾಜವಸ್ತ್ರಗಳಿದ್ದವು; ನೈಲ ಮತ್ತು ಯೂಫ್ರೇಟೀಸ್ ಕೊಳ್ಳಗಳಲ್ಲಿ ಸಮೃದ್ಧಿಯಾಗಿದ್ದ ಬರೆಯುವ ಕಲೆಯೂ ಅವರಿಗಿತ್ತು ಎಂಬುದರಲ್ಲಿ ಸಂಶಯವಿಲ್ಲ.

**6. ಒಡಂಬಡಿಕೆಯ ಮಹತ್ವ.**-ಅಬ್ರಹಾಮನ ಒಡಂಬಡಿಕೆಯು ಪಿತೃಗಳ ಅವಧಿಗೂ ಇಡೀ ಇಬ್ರಿಯ ಚರಿತ್ರೆಗೂ ಬೀಗದ ಕೈಯಂತಿರುತ್ತದೆ. ಕಥೆಯು ಆಳವಾಗಿ ಮಾನವತೆಯದಾಗಿದೆ ಎಂಬುದರಲ್ಲಿ ಸಂಶಯವಿಲ್ಲ. ಎಲ್ಲಾ ಸ್ವಾಭಾವಿಕ ಉದ್ದೇಶಗಳು ವಲಸೆಗಳಲ್ಲಿ ಮತ್ತು ಕುಟುಂಬದ ಹಾಗೂ ದೇಶದ ಜೀವನದಲ್ಲಿ ತಮ್ಮ ಭಾಗವನ್ನು ನಿರ್ವಹಿಸುತ್ತವೆ. ಆದರೆ ಸೃಷ್ಟಿಸುವ ಸಂಗತಿ ಮತ್ತು ಒತ್ತಡವು ಒಡಂಬಡಿಕೆಯಾಗಿದೆ. ಇಬ್ರಿಯರನ್ನು ಜಗತ್ತಿನಲ್ಲಿ ಭಿನ್ನರನ್ನಾಗಿ ಮಾಡಿದ್ದು ಅದಾಗಿರುತ್ತದೆ. ಅವರು ಸತತವಾಗಿ ಒಂದು ನಾಡನ್ನು, ಒಂದು ದೇಶವನ್ನು ಮತ್ತು ಎಲ್ಲಾ ಜನಾಂಗದವರನ್ನು ಆಶೀರ್ವದಿಸುವ ಒಂದು "ಸಂತತಿ"ಯನ್ನು ನೋಡುವಂತೆ ಅದು ಅವರನ್ನು ನಡಿಸಿತು. ಮೂಲದಲ್ಲಿ ಕಲ್ದೀಯದಲ್ಲಿ ಅಬ್ರಹಾಮನಿಗೆ ಮಾಡಲ್ಪಟ್ಟಿದ್ದು ಐದು ಇಲ್ಲವೇ ಆರು ಸಲ ಕಾನಾನಿನಲ್ಲಿ ಅವನಿಗೆ ದೃಢಪಡಿಸಲ್ಪಟ್ಟಿತು, ಇಸಾಕನಿಗೆ ಮತ್ತು ಪುನಃ ಪುನಃ ಯಾಕೋಬನಿಗೆ ಸ್ಪಷ್ಟವಾಗಿ ನವೀಕರಿಸಲ್ಪಟ್ಟಿತು, ಯೋಸೇಫನು ತನ್ನ ಸಾಯುವ ಜವಾಬ್ದಾರಿಕೆಯನ್ನು ಅದರ ಮೇಲೆ ಅವಲಂಭಿಸಿದನು; ಶತಮಾನಗಳ ನಂತರ ಅದು ಉರಿಯುವ ಪೊದೆಯ ಬಳಿಯಲ್ಲಿ ಮೋಶೆಗೆ ನವೀಕರಿಸಲ್ಪಟ್ಟಿತು, ಮತ್ತು ಜನಾಂಗಿಕ ಒಡಂಬಡಿಕೆಯಲ್ಲಿ ಸಿನಾಯಿಯ ಬಳಿಯಲ್ಲಿ ವಿಸ್ತರಿಸಲ್ಪಟ್ಟಿತು. ಒಬ್ಬ ಮನುಷ್ಯನ ಅಥವಾ ಜನಾಂಗದ ಗುಣದ ಮೇಲೆ ಅಂಥ ನಂಬಿಕೆಯ ಹಾಗೂ ನಿರೀಕ್ಷೆಯ ಸೃಷ್ಟಿಸುವ ಬಲದ ಅಳೆಯುವಿಕೆ ಇರುವುದಿಲ್ಲ.

---

ಟಿಪ್ಪಣಿಗಳು

[1]ಆದಿಕಾಂಡ 12:7. [2]ಆದಿಕಾಂಡ 22:2. [3]ಆದಿಕಾಂಡ 25:23. [4]ಆದಿಕಾಂಡ 37:19, 20. [5]ಡೀನರು "ಶ್ರಮೆಪಟ್ಟನು" ಎಂದಿದ್ದಾರೆ.

© 2009 Truth for Today